ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ
suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue: 36 | ಸಂಪುಟ: 05 ಸಂಚಿಕೆ: 36 | Date: 13-02-2026 Friday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ದೇಶದಲ್ಲೇ ಎರಡನೇ ಜಿಎಸ್ಟಿ ಪಾವತಿ ಮಾಡುವ ರಾಜ್ಯ ಕರ್ನಾಟಕ: ಗೃಹ ಸಚಿವ ಡಾ.ಜಿ. ಪರಮೇಶ್ವರ್

ಮಧುಗಿರಿ : ದೇಶದಲ್ಲೇ ಎರಡನೇ ಜಿಎಸ್ಟಿ ಪಾವತಿ ಮಾಡುವ ರಾಜ್ಯ ಕರ್ನಾಟಕ. ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ನೀಡುವುದಾಗಿ ಬಜೆಟ್ ನಲ್ಲಿ ಘೋಷಣೆ ಮಾಡಿದ್ದ ಕೇಂದ್ರ ಸರ್ಕಾರ ರಾಜ್ಯಕ್ಕೆ ನಯಾಪೈಸೆ ಕೊಡಲಿಲ್ಲ ಕೇಂದ್ರ ಸರ್ಕಾರ ನಮ್ಮ ಕೈ ಹಿಡಿಯಲಿಲ್ಲ ಎಂದು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ, ಗೃಹ ಸಚಿವ ಡಾ.ಜಿ. ಪರಮೇಶ್ವರ್ ಆರೋಪಿಸಿದರು.



ಮಧುಗಿರಿ ಪಟ್ಟಣದಲ್ಲಿ ಪೊಲೀಸ್ ವಸತಿ ಗೃಹ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ನಂತರ ಕೊಡಿಗೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಬೆಸ್ಕಾಂ ಎ.ಇ.ಇ. ನೂತನ ಕಟ್ಟಡ ಮತ್ತು ಪೊಲೀಸ್ ಠಾಣೆಯ ನೂತನ ಕಟ್ಟಡ ಉದ್ಘಾಟನೆ, ಕೊಡಿಗೇನಹಳ್ಳಿ ಪೊಲೀಸ್ ಠಾಣೆಯ ನೂತನ ಕಟ್ಟಡ ಉದ್ಘಾಟನೆ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದ ಅವರು ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಸರ್ಕಾರ ಬಡವರ ಕಲ್ಯಾಣಕ್ಕಾಗಿ 5 ಗ್ಯಾರಂಟಿ ಗಳನ್ನು ಅನುಷ್ಟಾನ ಮಾಡಿದ್ದೇವೆ. ಆದರೆ ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯ ದಿವಾಳಿಯಾಗಿದೆ ಎಂದು ವಿರೋಧ ಪಕ್ಷದವರು ರಾಜ್ಯದಿಂದ ಹಿಡಿದು ಪ್ರಧಾನ ಮಂತ್ರಿಗಳವರೆಗೆ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ, ಟಿಪ್ಪಣಿಗಳನ್ನು ಮಾಡುತ್ತಿದ್ದಾರೆ. ಆದರೂ ಸಿದ್ದರಾಮಯ್ಯನವರು ಎದೆಗುಂದದೇ ಗ್ಯಾರಂಟಿ ಯೋಜನಗಳ ಯಶಸ್ವಿಗೆ ಶಪಥ ಮಾಡಿದ್ದಾರೆ. ಯಾರು ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಮಾಡಿ, ರಾಜ್ಯ ದಿವಾಳಿಯಾಗಿದೆ ಎಂದು ಟೀಕಿಸಿದ್ದರೋ, ಇದೇ ಪಕ್ಷದವರು ಇತರೆ ರಾಜ್ಯಗಳ ಚುನಾವಣೆ ಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದು ಲೇವಡಿ ಮಾಡಿದರು.

ಮಧುಗಿರಿ ಜನತೆಯ ನಿಮ್ಮ ಪ್ರೀತಿ ಗೌರವ ವಿಶ್ವಾಸ ನನ್ನನ್ನು ಮುಗ್ಧನನ್ನಾಗಿ ಮಾಡಿದೆ. 11 ತಿಂಗಳಲ್ಲಿ ಪೋಲೀಸ್ ಠಾಣೆಯ ಕಟ್ಟಡ ಸುಂದರವಾಗಿ ಬಂದಿದೆ. 1954 ರಲ್ಲಿ ಕಟ್ಟಡ ನಿರ್ಮಾಣವಾಗಿತ್ತು. ಶಿಥಿಲಗೊಂಡ ಹಿನ್ನೆಲೆಯಲ್ಲಿ ರಾಜಣ್ಣನವರು ಕಟ್ಟಡಕ್ಕೆ ಮನವಿ ಮಾಡಿದರು. ರಾಜಣ್ಣ ಹೇಳಿದ ಮೇಲೆ ಮಾಡಲೇ ಬೇಕು. ರಾಜಣ್ಣ ನನಗೆ ಆತ್ಮೀಯ ಸ್ನೇಹಿತ. ಹಾಗಾಗಿ ಕಟ್ಟಡ ಮಂಜೂರು ಮಾಡಿ ಉದ್ಘಾಟನೆ ಮಾಡಿದ್ದೇನೆ. ಈ ಭಾಗದ ಪೋಲೀಸರು ಜನರ ಪರವಾಗಿರಬೇಕು. ಜನರ ಪ್ರೀತಿ, ವಿಶ್ವಾಸ ಗಳಿಸಿ ಅವರ ಕೆಲಸ ನ್ಯಾಯಯುತವಾಗಿ ಮಾಡಿಕೊಡಿ. ರಾಷ್ಟದಲ್ಲೇ ನಮ್ಮ ಪೋಲೀಸರು ಮಾದರಿಯಾಗಿದ್ದು, ಕರ್ನಾಟಕ ಪೋಲಿಸರು ದೇಶದಲ್ಲೇ ಹೆಮ್ಮೆ. ದೇಶದಲ್ಲೇ ನ್ಯಾಯ ಒದಗಿಸುವ ಇಲಾಖೆ ಕರ್ನಾಟಕ ಪೋಲೀಸರು ಎಂದು ಪ್ರಕಟಿಸಲಾಗಿದೆ. ಬೆಂಗಳೂರು ಮಹಿಳೆಯರಿಗೆ ಬಹಳ ಸುರಕ್ಷಿತ ನಗರ ಎಂದು ಘೋಷಿಸಿದ್ದು, ಇದು ನನಗೆ ಮತ್ತು ನಮ್ಮ ಪೋಲೀಸರಿಗೆ ಸಂದ ಗೌರವ ಎಂದು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ಕೊರಟಗೆರೆಯಲ್ಲಿ 500 ಕೋಟಿ ವೆಚ್ಚದಲ್ಲಿ ಪೋಲೀಸ್ ಬೆಟಾಲಿಯನ್ ಪ್ರಾರಂಭಿಸುತ್ತಿದ್ದು, ಸಾವಿರ ಜನರಿಗೆ ತರಬೇತಿ ನೀಡಲು ಇಲ್ಲಿನೂರಾರು ಸಿಬ್ಬಂದಿಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ. ಮಧುಗಿರಿ ಕ್ಷೇತ್ರದಲ್ಲಿ 36, ಕೊರಟಗೆರೆ ಕ್ಷೇತ್ರದಲ್ಲಿ 36 ವಸತಿ ಗೃಹಗಳು ಸೇರಿ ಸುಮಾರು 72 ಮನೆಗಳಿಗೆ ಅಡಿಗಲ್ಲು ಹಾಕಲಾಗಿದ್ದು, ಸಿಎಂ ಗಮನಕ್ಕೆ ತಂದು ಇನ್ನೂ ಹೆಚ್ಚಿನಮನೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ 36 ಕೋಟಿ ವೆಚ್ಚದಲ್ಲಿ ರೀಜನಲ್ ಪೋರೆನ್ಸಿಕ್ ಸೈನ್ಸ್ ಲ್ಯಾಬೊರೇಟೊರಿ ಪ್ರಾರಂಭಿಸಲಾಗುವುದು ಎಂದರು.

ಮಾಜಿ ಸಚಿವ, ಶಾಸಕ ಕೆ.ಎನ್.ರಾಜಣ್ಣ ಮಾತನಾಡಿ, ರಾಜ್ಯದ ಬಡವರ್ಗದವರ ಹಸಿವು ನೀಗಿಸಿದ ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದು ಪಂಚ ಗ್ಯಾರಂಟಿಗಳ ಮೂಲಕ ರಾಜ್ಯದ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ವಿಸ್ತರಿಸಿ ಎಲ್ಲಾ ಜನಾಂಗದವರ ಕೈ ಹಿಡಿದು ಜೊತೆ ನಡೆಯುತ್ತಿದೆ ನಮ್ಮ ಕಾಂಗ್ರೆಸ್ ಸರ್ಕಾರ,

ಕೊಡಿಗೇನಹಳ್ಳಿ ಪೊಲೀಸ್ ಠಾಣೆ ಸಂಪೂರ್ಣವಾಗಿ ಶಿಥಿಲಗೊಂಡು ಮಳೆ ಸೋರುತ್ತಿತ್ತು. ಇಂತಹ ದುಸ್ಥಿಯಲ್ಲಿದ್ದ ಕಟ್ಟಡವನ್ನು ನೂತನವಾಗಿ ನಿರ್ಮಾಣ ಮಾಡಿ ಪೊಲೀಸ್ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಲಾಗಿದೆ ಎಂದರು. ಪಟ್ಟಣದಲ್ಲಿ 36 ಪೊಲೀಸ್ ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗುವುದು ಹಾಗೂ ಕಾಮಗಾರಿ ಅತಿ ಜರೂರಾಗಿ ನಿರ್ಮಾಣ ಮಾಡಿ ಪೊಲೀಸರ ಕುಟುಂಬಕ್ಕೆ ಅನುಕೂಲವಾಗುತ್ತದೆ ಎಂದರು.

ಈ ಭಾಗದಲ್ಲಿ ಗಾರ್ಮೆಟ್ಸ್ ಗಳನ್ನು ಪ್ರಾರಂಭ ಮಾಡಿ ಯುವಕ ಹಾಗೂ ಯುವತಿಯರಿಗೆ ಉದ್ಯೋಗ ಒದಗಿಸುವುದೇ ನಮ್ಮ ಗುರಿಯಾಗಿದ್ದು, ಶೀಘ್ರವಾಗಿ ಆ ಕಾರ್ಯವನ್ನು ಮಾಡಲಾಗುವುದು ಎಂದರು. ಕೊಡಿಗೇನಹಳ್ಳಿ ಬಸ್ ನಿಲ್ದಾಣವನ್ನು ಆಧುನೀಕರಣ ಮಾಡಿಸಲಾಗುವುದು ಎಂದರು. ಈ ಭಾಗದಲ್ಲಿ ಅತ್ಯಂತ ಬಡವರಿದ್ದು, ಪೋಷಕರು ತಪ್ಪದೇ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದರು.

ಸಿಎಂ ಸಿದ್ದರಾಮಯ್ಯನವರು ಅನ್ನಭಾಗ್ಯ ಯೋಜನೆ ಜಾರಿಗೆ ತಂದಿದ್ದು, ಬಡವರಲ್ಲಿ ಸ್ವಾಭಿಮಾನ ತಂದಿದೆ. ಜಾತ್ಯಾತೀತವಾಗಿ ಎಲ್ಲ ಬಡವರು ನೆಮ್ಮದಿಯಿಂದ ಜೀವನ ನಿರ್ವಹಣೆ ಮಾಡಲು ಅನ್ನ ಭಾಗ್ಯ ಯೋಜನೆ ಸಹಕಾರಿಯಾಗಿದೆ. ಹಸಿನಿಂದ ಬಳಲುವವರಿಗೆ ಅನ್ನ ಭಾಗ್ಯದ ಮಹತ್ವ ಗೊತ್ತಿದೆ. ಆದ್ದರಿಂದ ಅನ್ನಭಾಗ್ಯ ಮಹತ್ವದ ಯೋಜನೆ. ಎಲ್ಲ ಜಾತಿಯಲ್ಲೂ ಬಡವರಿದ್ದು, ಎಲ್ಲ ಜಾತಿಯ ಬಡವರ ಯೋಗ ಕ್ಷೇಮ ನೋಡುವ ಮೂಲಕ ಅವರ ಉನ್ನತಿಗೆ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಶ್ರಮಿಸುತ್ತಿದೆ ಎಂದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

## ಸಾಲದ ಹೊರೆ ,ಉದ್ಯೋಗದ ಅಭಾವ ಆರ್ಥಿಕ ಅಸಮತೋಲನವೂ ಜೀತ ಪದ್ಧತಿಗೆ ಕಾರಣ : ಎಸ್‌ಪಿ ಕೆ.ವಿ. ಅಶೋಕ್

ತುಮಕೂರು: ಸಾಲದ ಹೊರೆ ಹಾಗೂ ಉದ್ಯೋಗದ ಅಭಾವದಿಂದ ಅನೇಕರು ಸಾಲ ಪಡೆದು ಮನೆಗೆಲಸ, ತೋಟ ಮತ್ತು ಕಾರ್ಖಾನೆಗಳಲ್ಲಿ ಬಲವಂತದ ಜೀತದಾರರಾಗಿ ಕೆಲಸ ಮಾಡುವ ಪರಿಸ್ಥಿತಿ ಉಂಟಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಅವರು ಕಳವಳ ವ್ಯಕ್ತಪಡಿಸಿದ್ದಾರೆ.



ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ಜೀತಪದ್ಧತಿಯ ನಿರ್ಮೂಲನ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜೀತಪದ್ಧತಿ ಎಂಬುದು ಕೇವಲ ಸಾಮಾಜಿಕ ಸಮಸ್ಯೆಯಲ್ಲ, ಅದು ಆರ್ಥಿಕ ಅಸಮತೋಲನದಿಂದ ಉಂಟಾಗುವ ಗಂಭೀರ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ವಿದೇಶಗಳಲ್ಲಿ ಹೆಚ್ಚಿನ ಸಂಬಳ ಸಿಗುತ್ತದೆ, ಉತ್ತಮ ಜೀವನ ಸಾಗಿಸಬುದು ಎಂಬ ಸುಳ್ಳು ಭರವಸೆ ನೀಡಿ ಜನರನ್ನು ಮೋಸಗೊಳಿಸಿ ಮಾನವ ಕಳ್ಳಸಾಗಾಣಿಕೆ ನಡೆಸುವ ಘಟನೆಗಳು ಹೆಚ್ಚುತ್ತಿವೆ. ವಿದೇಶದಲ್ಲಿ ಕೆಲಸ ಕೊಡಿಸುತ್ತೇವೆ ಎಂದು ಕರೆದುಕೊಂಡು ಹೋಗಿ, ಪಾಸ್‌ಪೋರ್ಟ್‌ಗಳನ್ನು ಕಸಿದುಕೊಂಡು, ಅಲ್ಲಿ ದುಡಿಮೆ ಮಾಡಿಸಿ ಸರಿಯಾದ ವೇತನ ನೀಡದೆ ಬಲವಂತವಾಗಿ ಜೀತದಾಳರಾಗಿ ಕೆಲಸ ಮಾಡಿಸುತ್ತಿರುವ ಪ್ರಕರಣಗಳು ಹಲವಾರು ದೇಶಗಳಲ್ಲಿ ಕಂಡು ಬರುತ್ತಿವೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣದ ಕೊರತೆ, ಉದ್ಯೋಗದ ಅಭಾವ ಹಾಗೂ ಮಾಹಿತಿಯ ಕೊರತೆಯಿಂದ ಜನರು ಸುಲಭವಾಗಿ ಮೋಸಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಯಾವುದೇ ಕೆಲಸಕ್ಕಾಗಿ ವಿದೇಶಕ್ಕೆ ಹೋಗುವ ಮೊದಲು ಸರ್ಕಾರದಿಂದ ಮಾನ್ಯತೆ ಪಡೆದ ಏಜೆನ್ಸಿಗಳ ಮೂಲಕವೇ ಹೋಗಬೇಕು, ಅನುಮಾನಾಸ್ಪದ ವ್ಯಕ್ತಿಗಳು ಅಥವಾ ಸಂಸ್ಥೆಗಳ ಮಾತುಗಳನ್ನು ನಂಬಬಾರದು ಎಂದು ಅವರು ಸಲಹೆ ನೀಡಿದರು.

ಜೀತಪದ್ಧತಿ ನಿರ್ಮೂಲನೆಗೆ ಸರ್ಕಾರ ಮಾತ್ರವಲ್ಲ, ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕು. ಸಂಶಯಾಸ್ಪದ ಚಟುವಟಿಕೆಗಳು ಕಂಡುಬಂದರೆ ತಕ್ಷಣ ಪೊಲೀಸ್ ಇಲಾಖೆ ಅಥವಾ ಸಂಬಂಧಿತ ಅಧಿಕಾರಿಗಳಿಗೆಮಾಹಿತಿನೀಡಬೇಕು. ಮಾನವ ಕಳ್ಳಸಾಗಾಣಿಕೆ ಹಾಗೂ ಜೀತಪದ್ಧತಿಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕಾನೂನುಗಳಿವೆ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ಎಚ್ಚರಿಸಿದರು.

ಜನರಲ್ಲಿ ಜಾಗೃತಿ ಮೂಡಿಸುವುದು, ಶಿಕ್ಷಣ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಮತ್ತು ಸಾಮಾಜಿಕ ಸಹಕಾರದ ಮೂಲಕವೇ ಜೀತಪದ್ಧತಿಯನ್ನು ಸಂಪೂರ್ಣ ನಿರ್ಮೂಲನೆ ಮಾಡಬಹುದು ಎಂದು ಅವರು ಹೇಳಿದರು.

ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ ಮಾತನಾಡಿ, ವಸತಿ ನಿಲಯವಿಲ್ಲದೆ ಒಂದು ಹೊತ್ತು ಊಟಕ್ಕೂ ಪರದಾಡುವಂತಹ ದುರ್ಬಲ ವರ್ಗದ ಜನರು ಹಾಗೂ ಸಾಲ ಪಡೆದು ಅದನ್ನು ತೀರಿಸಲು ಸಾಧ್ಯವಾಗದೆ ಮನೆಗಳು, ತೋಟಗಳು ಮತ್ತು ಕಾರ್ಖಾನೆಗಳಲ್ಲಿ ಜೀತಪದ್ಧತಿಗೆ ಒಳಗಾಗುವ ಪರಿಸ್ಥಿತಿ ಉಂಟಾಗುತ್ತಿದೆ ಎಂದು ಹೇಳಿದರು.

ಇಂತಹ ಶೋಷಣೆಯಿಂದ ಜನರನ್ನು ರಕ್ಷಿಸಿ ಜೀತಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ಕಾರವು ವಿವಿಧ ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳ ಬಗ್ಗೆ ಜನರಿಗೆ ಸಮರ್ಪಕ ಮಾಹಿತಿ ನೀಡಿ ಸದುಪಯೋಗಪಡಿಸಿಕೊಳ್ಳುವಂತೆ ಮಾಡುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.

ಜೀತಪದ್ಧತಿ ನಿರ್ಮೂಲನೆಗೆ ಕೇವಲ ಕಾನೂನು ಜಾರಿ ಸಾಕಾಗುವುದಿಲ್ಲ ಜನರಲ್ಲಿ ಜಾಗೃತಿ ಮೂಡಿಸುವುದು, ಶಿಕ್ಷಣ ಹಾಗೂ ಉದ್ಯೋಗಾವಕಾಶಗಳನ್ನು ವೃದ್ಧಿಸುವುದು ಮತ್ತು ಸಮಾಜದ ಸಹಭಾಗಿತ್ವ ಅತ್ಯಂತ ಅಗತ್ಯ ಎಂದು ಅವರು ಹೇಳಿದರು. ಸಂಬಂಧಿತ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಪೀಡಿತರನ್ನು ಗುರುತಿಸಿ ಪುನರ್ವಸತಿ ಕಲ್ಪಿಸುವ ಮೂಲಕ ಜೀತಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿಗಳಾದ ನಾಹಿದಾ ಜಮ್ ಜಮ್ ಹಾಗೂ ಗೋಟೂರು ಶಿವಪ್ಪ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಸಂಜೀವಪ್ಪ ಹಾಗೂ ಈಶ್ವರಪ್ಪ, ತಹಸೀಲ್ದಾರ್ ರಾಜೇಶ್ವರಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಎಐ ತಂತ್ರಜ್ಞಾನದ ಕನ್ನಡ,ಇಂಗ್ಲಿಷ್,ಹಿಂದಿ ಭಾಷೆಗಳ ಕಂಠ ಪಾಠ ಪದ್ಯಗಳ ಅನುಕೂಲ ಪಡೆಯಲು:ಕ್ಯೂ ಆರ್ ಕೊಡನ್ನು ಸ್ಕ್ಯಾನ್ ಮಾಡಿ

ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಎ ಐ ತಂತ್ರಜ್ಞಾನದ ಕನ್ನಡ,ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ಕಂಠಪಾಠ ಪದ್ಯಗಳ ಅನುಕೂಲ ಪಡೆಯಿರಿ:– ಶಿಕ್ಷಣಾಧಿಕಾರಿ ಫೈರೋಜ್ ಬೇಗಂ.

ಮಾರ್ಚ್ 2026ರಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ನಡೆಯಲಿರುವ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಆಗಲೆಂದು ಎ ಐ ತಂತ್ರಜ್ಞಾನದ ಸಹಾಯದಿಂದ ಮೂರು ಭಾಷೆಗಳಾದ ಕನ್ನಡ ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಲ್ಲಿ ಸಂಗೀತ ಸಂಯೋಜನೆ ಮಾಡಲಾಗಿದೆ. ಇದು ಒಟ್ಟು 12 ಅಂಕಗಳನ್ನು ಒಳಗೊಂಡಿದ್ದು, ವಿದ್ಯಾರ್ಥಿಗಳಿಗಳು ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಫೈರೋಜ್ ಬೇಗಂ ತಿಳಿಸಿದ್ದಾರೆ

ಗೃಹ ಸಚಿವರು ಹಾಗೂ ಕೊರಟಗೆರೆ ಕ್ಷೇತ್ರದ ಶಾಸಕರಾದ ಡಾ ಜಿ ಪರಮೇಶ್ವರ್ ಮಾರ್ಗದರ್ಶನ, ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಮಾನ್ಯ ಉಪ ನಿರ್ದೇಶಕರು ಮಾಧವ ರೆಡ್ಡಿ ಅವರ ಸಾರ್ಥಕ ನೇತೃತ್ವದಲ್ಲಿ ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿಯಾದ ರುದ್ರೇಶ್ ಸಹಕಾರದೊಂದಿಗೆ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಕನ್ನಡ ಇಂಗ್ಲೀಷ್ ಮತ್ತು ಹಿಂದಿ ವಿಷಯಗಳಲ್ಲಿ ಕಂಠಪಾಠಕ್ಕೆ ನಿಗದಿ ಪಡಿಸಿರುವ ಪದ್ಯಗಳನ್ನು ತೊವಿನಕೆರೆ ಸಿ ಆರ್ ಪಿ ಗಳಾದ ಹರೀಶ್ ಕುಮಾರ್ ರವರು ಎ ಐ ಆಧಾರಿತ ರಾಜ್ಯ ಸಂಯೋಜನೆಯೊಂದಿಗೆ ಸಿದ್ದಪಡಿಸಲಾಗಿದೆ.

ಈ ವಿನೂತನ ಶೈಕ್ಷಣಿಕ ಪದ್ಯವನ್ನು ಕೊರಟಗೆರೆ ತಾಲ್ಲೂಕಿನ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅನುಕೂಲ ಆಗುವಂತೆ ಸಿದ್ದಪಡಿಸಿದ್ದು ಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುವ ಕ್ಯೂ ಆರ್ ಕೊಡನ್ನು ಸ್ಕ್ಯಾನ್ ಮಾಡಿಕೊಂಡು ಎಲ್ಲಾ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಂದಾಯ ಗ್ರಾಮಗಳಿಗೆ ಹಕ್ಕುಪತ್ರ, ದರಖಾಸ್ತು ಪೋಡಿ ಯೋಜನೆ ಯಶಸ್ವಿ

### 9 ತಹಶೀಲ್ದಾರ್, 3 ಗ್ರಾಮ ಆಡಳಿತ ಅಧಿಕಾರಿಗಳಿಗೆ ಸರ್ಕಾರದ ಅಭಿನಂದನಾ ಪತ್ರ

ತುಮಕೂರು: ಕಂದಾಯ ಇಲಾಖೆಯ ಕಂದಾಯ ಗ್ರಾಮಗಳ ಹಕ್ಕುಪತ್ರ, ದರಖಾಸ್ತು ಪೋಡಿ(1–5), ಇ–ಪೌತಿ ಯೋಜನೆಯನ್ನು ಸಾರ್ವಜನಿಕರಿಗೆ ಒದಗಿಸುವ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರ ಕಂದಾಯ ಇಲಾಖೆಯ ತಹಶೀಲ್ದಾರ್ ಹಾಗೂ ಗ್ರಾಮ ಆಡಳಿತ ಅಧಿಕಾರಿಗಳಿಗೆ ಅಭಿನಂದನಾ ಪತ್ರ ನೀಡಲು ನಿರ್ಧರಿಸಿದ್ದು, ತುಮಕೂರು ಜಿಲ್ಲೆಯ 9 ತಹಶೀಲ್ದಾರರು ಹಾಗೂ ಮೂವರು ಗ್ರಾಮ ಆಡಳಿತ ಅಧಿಕಾರಿಗಳು ಅಭಿನಂದನಾ ಪತ್ರದ ಗೌರವಕ್ಕೆ ಭಾಜನರಾಗಿದ್ದಾರೆ.

ರಾಜ್ಯದ ಒಟ್ಟು 50 ತಹಶೀಲ್ದಾರರು ಈ ಗೌರವಕ್ಕೆ ಪಾತ್ರರಾಗಿದ್ದು, ತುಮಕೂರು ಜಿಲ್ಲೆಯ 10 ತಾಲ್ಲೂಕುಗಳ ಪೈಕಿ 9 ತಹಶೀಲ್ದಾರರು ಅಭಿನಂದನಾ ಪತ್ರ ಗೌರವಕ್ಕೆ ಪಾತ್ರರಾಗಿದ್ದಾರೆ. ಗುಬ್ಬಿ ತಾಲ್ಲೂಕಿನ ಆರತಿ ಬಿ., ಶಿರಾ ತಾಲ್ಲೂಕಿನ ಆನಂದ್ ಕುಮಾರ್, ತುಮಕೂರು ತಾಲ್ಲೂಕಿನ ರಾಜೇಶ್ವರಿ ಪಿ.ಎಸ್., ತುರುವೇಕೆರೆ ತಾಲ್ಲೂಕಿನ ಎನ್. ಕೆ. ಕುಂಞ ಅಹಮದ್, ತಿಪಟೂರು ತಾಲ್ಲೂಕಿನ ಜಿ.ವಿ. ಮೋಹನ್‌ಕುಮಾರ್, ಮಧುಗಿರಿ ತಾಲ್ಲೂಕಿನ ಶ್ರೀನಿವಾಸ್ ಹೆಚ್., ಪಾವಗಡ ತಾಲ್ಲೂಕಿನ ರವಿ ವೈ., ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮಮತ ಎಂ., ಕೊರಟಗೆರೆ ತಾಲ್ಲೂಕಿನ ಮಂಜುನಾಥ್ ಕೆ. ಗ್ರಾಮ ಆಡಳಿತ ಅಧಿಕಾರಿಗಳಾದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಿಗೇಬಾಗಿ ಪ್ರಿಯಾಂಕ ಹೆಚ್.ಈ., ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಲತಾಮಣಿ ಎಸ್. ಎನ್., ತಿಪಟೂರು ವಿಜ್ಞಸಂತೆಯ ಚಂದನಾ ಹಾಗೂ ತುರುವೇಕೆರೆ ತಾಲ್ಲೂಕು ಭೂದಾಖಲೆ ಸಹಾಯಕ ನಿರ್ದೇಶಕ ಸಿ. ಜಗದೀಶ್ ಅವರು ಅಭಿನಂದನಾ ಪತ್ರ ಗೌರವಕ್ಕೆ ಪಾತ್ರರಾಗಿದ್ದಾರೆ.

ಬರುವ ಶನಿವಾರ ಹಾವೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಂದಾಯ ಇಲಾಖೆಯ ಕಾರ್ಯಕ್ರಮದಲ್ಲಿ ಅಭಿನಂದನಾ ಪತ್ರಗಳನ್ನು ನೀಡಲು ಕಂದಾಯ ಇಲಾಖೆ ನಿರ್ಧರಿಸಿರುವುದಾಗಿ ಇಲಾಖೆ ಆಯುಕ್ತರ ಪ್ರಕಟಣೆ ತಿಳಿಸಿದೆ. ತುಮಕೂರು ಜಿಲ್ಲೆಯ ಕಂದಾಯ ಇಲಾಖೆ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಇಲಾಖೆಯ ಅಭಿನಂದನಾ ಪತ್ರದ ಗೌರವಕ್ಕೆ ಪಾತ್ರರಾದ ತಹಶೀಲ್ದಾರರು, ಗ್ರಾಮ ಆಡಳಿತ ಅಧಿಕಾರಿಗಳು, ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಸರ್ಕಾರದ ಅಭಿನಂದನಾ ಪತ್ರಕ್ಕೆ ಭಾಜನರಾಗಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯ ಎಂದು ಹರ್ಷ ವ್ಯಕ್ತಪಡಿಸಿರುವ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಗೌರವಕ್ಕೆ ಪಾತ್ರರಾದ ಎಲ್ಲಾ ಅಧಿಕಾರಿಗಳನ್ನು ಪ್ರಶಂಸಿಸಿ ಅಭಿನಂದಿಸಿದ್ದಾರೆ

## ಕ್ರೀಡಾ ಕೂಟ ಮೇಲು,ಕೀಳು,ಬಡವ, ಬಲ್ಲಿದ ಎಂಬ ಭೇಧ ಭಾವವಿಲ್ಲದೆ ಎಲ್ಲರೂ ಒಂದೆಡೆ ಸೇರಿಸುವ ವೇದಿಕೆ

ತುಮಕೂರು: ಕ್ರೀಡೆ ಮನುಷ್ಯನಲ್ಲಿ ಸ್ಫೂರ್ತಿಯನ್ನು ನೀಡುತ್ತಿದೆ. ಕ್ರೀಡೆಯಿಂದ ಹೊಸ ಹುಮ್ಮಸ್ಸು ಬರುವುದಲ್ಲದೆ, ಎಲ್ಲರೂ ಸೇರಿ ಒಂದು ತಂಡವಾಗಿ ಕೆಲಸ ಮಾಡಲು ಸಹಕಾರಿಯಾಗಲಿದೆ ಎಂದು ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಅಶೋಕ್.ಕೆ.ವಿ. ತಿಳಿಸಿದ್ದಾರೆ.



ನಗರದ ಮಹಾತ್ಮಗಾಂಧಿ ಸ್ಟೇಡಿಯಂನ ಡಾ.ಜಿ.ಪರಮೇಶ್ವರ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬೆಂಗಳೂರು ವಿಭಾಗೀಯ ಮಟ್ಟದ ಸಮಾಜ ಕಲ್ಯಾಣ ಇಲಾಖೆ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಮಾತನಾಡುತಿದ್ದ ಅವರು,ಇತ್ತೀಚಿನ ದಿನಗಳಲ್ಲಿ ಕ್ರೀಡಾ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿವೆ .ನಮ್ಮ ಇಲಾಖೆಯಲ್ಲಿ ಪ್ರತಿ ವರ್ಷ ಕ್ರೀಡಾ ಕೂಟ ಏರ್ಪಡಿಸಲಾಗುತ್ತಿದೆ. ಇದು ನಿಮಗೆ ಎರಡನೇ ವರ್ಷದ ಕ್ರೀಡಾ ಕೂಟ. ನಿಮ್ಮಲ್ಲಿರುವ ಪ್ರತಿಭೆ ಪ್ರದರ್ಶನಕ್ಕೆ ಇದು ಒಳ್ಳೆಯ ವೇದಿಕೆ ಇದನ್ನು ಬಳಕೆ ಮಾಡಿಕೊಂಡು, ಮತ್ತಷ್ಟು ಉತ್ಸಾಹದಿಂದ ವೃತ್ತಿಜೀವನದಲ್ಲಿ ಮೇಲೆ ಬರಲು ಪ್ರಯತ್ನಿಸಿ ಎಂದರು.ತುಮಕೂರು ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ರಾಜ್ಯ ಮಟ್ಟದ ಒಲಂಪಿಕ್ ಕ್ರೀಡಾಕೂಟ ನಡೆದಿವೆ. ಕ್ರೀಡಾ ಚಟುವಟಿಕೆಗೆ ಒಳ್ಳೆಯ ವ್ಯವಸ್ಥೆ ಇದೆ. ನಿಮಗೆ ಒಳ್ಳೆಯ ಕ್ರೀಡಾ ಮನೋಭಾವನೆ ಒಳ್ಳೆಯಲು ಸಹಕಾರಿಯಾಗಲಿದೆ. ಈಕ್ರೀಡಾ ಕೂಟದ ಮೂಲಕ ನಿಮ್ಮ ಇಲಾಖೆಯ ವಿವಿಧ ಜಿಲ್ಲೆಗಳ ನೌಕರರ ಸಮನ್ವಯತೆ ಬೆಳೆಯಲಿದೆ.ಇದು ಮುಂದಿನ ದಿನಗಳಲ್ಲಿ ಮತ್ತಷ್ಟು ಗಟ್ಟಿತನದಿಂದ ಕೆಲಸ ಮಾಡಲು ಸಹಕಾರಿಯಾಗಲಿದೆ ಎಂದು ಎಸ್ಪಿ ಅಶೋಕ್ ಕೆ.ವಿ. ನುಡಿದರು.

ತುಮಕೂರು ಜಿಲ್ಲಾ ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ ಮಾತನಾಡಿ, ಕ್ರೀಡಾ ಕೂಟಗಳಿಗೆ ಮೇಲು,ಕೀಳು,ಬಡವ, ಬಲ್ಲಿದ ಎಂಬ ಭೇಧ ಭಾವವಿಲ್ಲದೆ ಎಲ್ಲರೂ ಒಂದೆಡೆ ಸೇರಿಸುವ ವೇದಿಕೆಯಾಗಿದೆ.ಕ್ರೀಡೆಗೆ ಎಲ್ಲರನ್ನು ಒಗ್ಗೂಡಿಸುವ ಶಕ್ತಿ ಇದೆ.ಎರಡು ದಿನಗಳ ಕಾಲ ನಡೆಯುವ ಕ್ರೀಡಾ ಕೂಟದಲ್ಲಿ ತಾವೆಲ್ಲೂ ಕ್ರೀಡಾ ಮನೋಭಾವದಿಂದ ಭಾಗವಹಿಸಿ, ನಿಮ್ಮ ಪ್ರತಿಭೆ ಪ್ರದರ್ಶಿಸಿ ಎಂದು ಕಿವಿ ಮಾತು ಹೇಳಿದರು.

ಕ್ರೀಡಾಯಲ್ಲಿ ಸಾಧನೆ ಮಾಡಬೇಕಾದರೆ ಮನಸ್ಸು ಮತ್ತು ಪ್ರಜ್ಞೆ ಎರಡು ಒಗ್ಗೂಡಿಸಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ತೊಡಗಿಸಿಕೊಂಡರೆ ಯಶಸ್ಸು ಸಾಧಿಸಬಹುದು.ಎಲ್ಲರಲ್ಲಿಯೂ ಪ್ರತಿಭೆ ಇರುತ್ತದೆ. ಅದನ್ನುಓರೆಗೆ ಹಚ್ಚಲು ಇಂತಹ ಕ್ರೀಡಾಕೂಟಗಳು ಸಹಕಾರಿಯಾಗಲಿವೆ. ನಿರಂತರ ಪ್ರಯತ್ನದಿಂದ ಅವುಗಳನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯವಿದೆ. ಆಟವಾಡಲು, ಹಾಡು ಹಾಡಲು ಎರಡಕ್ಕೂ ಅವಕಾಶವಿದೆ. ನಿಮ್ಮ ಇಚ್ಚೆಯ ವಿಷಯದಲ್ಲಿ ಏಕಾಗ್ರತೆಯಿಂದ ಪಾಲ್ಗೊಳ್ಳಿ ಎಂದು ಎಡಿಸಿ ಡಾ.ಎನ್.ತಿಪ್ಪೇಸ್ವಾಮಿ ಸಲಹೆ ನೀಡಿದರು.

ವೇದಿಕೆಯಲ್ಲಿ ತುಮಕೂರು ಉಪವಿಭಾಗಾಧಿಕಾರಿ ನಾಹಿದ್ ಜಮ್ಜ್‌ಜಮ್ಜ್ ,ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಲಕ್ಷ್ಮಣ ರೇಖಿ, ಕೃಷ್ಣಪ್ಪ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ನೌಕರರು ಪಾಲ್ಗೊಂಡಿದ್ದರು.

# ಪವರ್ ಶೇರಿಂಗ್ ಪಾಲಿಟಿಕ್ಸ್ : ನಾಯಕತ್ವದ ಬದಲಾವಣೆ ಬಗ್ಗೆ ಸಿಎಂ ಸಿದ್ದರಾಮಯ್ಯ ಗರಂ

## ಸಿಎಂ ಕೊಟ್ಟ ಮಾತು ಉಳಿಸಿಕೊಳ್ತಾರೆ: ಡಿಕೆ ಸುರೇಶ್..!

ಡಿಸಿಎಂ ಡಿಕೆ ಶಿವಕುಮಾರ್ ದೆಹಲಿಗೆ ಹೋಗ್ತಿದ್ದಂತೆ ಇತ್ತ ರಾಜ್ಯದಲ್ಲಿ ಪವರ್ ಶೇರಿಂಗ್ ವಿಚಾರದ ಚರ್ಚೆ ಮತ್ತೆ ಗರಿಗೆದರಿದೆ. ಇತ್ತ ನಾಯಕತ್ವದ ಬದಲಾವಣೆ ಸಂಬಂಧ ಮಾಧ್ಯಮದವರು ಪ್ರಶ್ನೆ ಮಾಡ್ತಿದ್ದಂತೆ ಸಿಎಂ ಸಿದ್ದರಾಮಯ್ಯ ಫುಲ್ ಗರಂ ಆಗಿದ್ದಾರೆ. ಸಿಎಂ ಕೊಟ್ಟ ಮಾತು ಉಳಿಸಿಕೊಳ್ತಾರೆ ಎಂಬ ಡಿಕೆ ಸುರೇಶ್ ಹೇಳಿಕೆ ಬಗ್ಗೆಯೂ ಸಿದ್ದರಾಮಯ್ಯ ಸಿಟ್ಟಾಗಿದರು .

**ಸಿಎಂ ಸಿದ್ದರಾಮಯ್ಯ ಗರಂ**

ಪವರ್ ಶೇರಿಂಗ್ ವಿಚಾರದ ಬಗ್ಗೆ ಪ್ರಶ್ನೆ ಮಾಡ್ತಿದ್ದಂತೆ ಸಿಎಂ ಸಿದ್ದರಾಮಯ್ಯ ಗರಂ ಆಗಿದ್ದಾರೆ. ಅದನ್ನ ಬಿಟ್ಟು ಬೇರೆ ಏನು ಕೇಳೋಕೆ ಬರಲ್ವಾ ಎಂದು ಕೋಪಗೊಂಡ ಸಿಎಂ, ಇದೆಲ್ಲಾ ಶುರುವಾಗಿ ಮೂರು ತಿಂಗಳೇ ಆಯ್ತು. ದಯಮಾಡಿ ಇನ್ಮೇಲೆ ಈ ವಿಚಾರದ ಬಗ್ಗೆ ಪ್ರಶ್ನೆ ಮಾಡ್ಬೇಡಿ ಎಂದು ಸಿಎಂ ಗರಂ ಆಗಿದ್ದಾರೆ.

**'ಹೈಕಮಾಂಡ್ ಹೇಳಿದಂತೆ ಕೇಳ್ತೀನಿ'**

ಹೈಕಮಾಂಡ್‌ಗೆ ಎಲ್ಲವೂ ಗೊತ್ತು. ಅವರೇ ಎಲ್ಲವನ್ನ ತೀರ್ಮಾನ ಮಾಡ್ತಾರೆ. ಹೈಕಮಾಂಡ್ ಏನ್ ತೀರ್ಮಾನ ಮಾಡುತ್ತೋ ಅದರಂತೆ ನಾನು ನಡೆದುಕೊಳ್ತೇನೆ. ಇದನ್ನ ಎಷ್ಟು ಸಾರಿ ಹೇಳೋದು. ಇನ್ಮೇಲೆ ಈ ಬಗ್ಗೆ ಕೇಳ್ಬೇಡಿ. ಹೈಕಮಾಂಡ್ ಹೇಳಿದಂತೆ ನಾನು ನಡೆದುಕೊಳ್ಳಬೇಕು. ಡಿಕೆ ಶಿವಕುಮಾರ್ ಕೂಡ ನಡೆದುಕೊಳ್ಳಬೇಕು. ಇದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದಿದ್ದಾರೆ.

**ಡಿಕೆ ಸುರೇಶ್ ಮಾತಿಗೆ ಟಾಂಗ್**

ತಡವಾದ್ರೂ ಸಿದ್ದರಾಮಯ್ಯ ಅವರು ಕೊಟ್ಟ ಮಾತು ಉಳಿಸಿಕೊಳ್ತಾರೆ



ಎಂಬ ಡಿಕೆ ಸುರೇಶ್ ಮಾತಿನ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಯಾರು ಈ ಬಗ್ಗೆ ಮಾತಾಡಿದ್ದಾರೆ ಅವರನ್ನ ಕೇಳಿ, ನನಗೆ ಯಾಕೆ ಕೇಳ್ತೀರಾ? ನಾನು ಹೈಕಮಾಂಡ್ ಹೇಳಿದಂತೆ ಕೇಳೋದು ಎಂದು ಪುನರುಚ್ಚರಿಸಿದ್ದಾರೆ.

**ಸ್ವಂತ ಖರ್ಚಿನಲ್ಲಿ ಪ್ರವಾಸ: ಸಿಎಂ**

ಮುಖ್ಯಮಂತ್ರಿಗಳೇ ಶಾಸಕರನ್ನ ವಿದೇಶ ಪ್ರವಾಸಕ್ಕೆ ಕಳಿಸ್ತಿದ್ದಾರೆ ಎನ್ನುವ ವಿಚಾರದ ಬಗ್ಗೆ ಮಾತಾಡಿದ ಸಿದ್ದರಾಮಯ್ಯ ಅವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಅವರ ದುಡ್ಡಲ್ಲಿ ಅವರು ಹೋದ್ರೆ ತಪ್ಪೇನು. ನನ್ನ ಗಮನಕ್ಕೆ ಇದು ಬಂದಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

**ನಿಧಾನವಾದ್ರೂ ಸಿಎಂ ಕೊಟ್ಟ ಮಾತು ಉಳಿಸಿಕೊಳ್ತಾರೆ**

ನಾಯಕತ್ವ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಡಿಕೆ ಸುರೇಶ್ ಅವ್ರು ನನಗೆ ಈಗಲೂ ಭರವಸೆ ಇದೆ. ನಿಧಾನವಾದ್ರೂ ಪರವಾಗಿಲ್ಲ, ಸಿದ್ದರಾಮಯ್ಯ ಕೊಟ್ಟ ಮಾತನ್ನು ಉಳಿಸಿಕೊಳ್ತಾರೆ ಎಂಬ ವಿಶ್ವಾಸವಿದೆ ಎನ್ನುತ್ತಾ ಸಿದ್ದರಾಮಯ್ಯ ಅವರಿಗೆ ಮತ್ತೆ ಕೊಟ್ಟ ಮಾತಿನ ಬಗ್ಗೆ ಡಿಕೆ ಸುರೇಶ್ ನೆನಪು ಮಾಡಿದ್ದಾರೆ.

**'ನಾವು ಯಾರನ್ನು ವಿದೇಶಕ್ಕೆ ಕಳಿಸ್ತಿಲ್ಲ'**

ಸಿಎಂ ಸಿದ್ದರಾಮಯ್ಯ ಅವರು ಶಾಸಕರನ್ನ ವಿದೇಶಿ ಪ್ರವಾಸಕ್ಕೆ ಕಳುಹಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಮಾತಾಡಿದ ಮಾಜಿ ಸಂಸದ ಡಿಕೆ ಸುರೇಶ್ ಅವ್ರು ವಿದೇಶ ಪ್ರವಾಸ ಯಾರು ಹೋಗ್ತಿದ್ದಾರೆ ಅವರನ್ನೇ ಕೇಳಬೇಕು ಎಂದಿದ್ದಾರೆ.

## ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಶಾಸಕರು

**ವಿದೇಶ ಪ್ರವಾಸಕ್ಕೂ ಡಿಕೆಶಿಗೂ ಸಂಬಂಧವಿಲ್ಲ**

ವಿದೇಶ ಪ್ರವಾಸವನ್ನ ಡಿಸಿಎಂ ಡಿಕೆ ಶಿವಕುಮಾರ್ ಆಯೋಜನೆ ಮಾಡಿದ್ದಲ್ಲ. ವಿದೇಶ ಪ್ರವಾಸಕ್ಕೂ ಡಿಕೆಶಿಗೂ ಸಂಬಂಧವಿಲ್ಲ. ಅದನ್ನು ಮಾತ್ರ ಸ್ಪಷ್ಟವಾಗಿ ಹೇಳಬಲ್ಲೆ. ವಿದೇಶ ಪ್ರವಾಸದ ಆಯೋಜಕರನ್ನೇ ಕೇಳಿ ಎಂದು ಡಿಕೆ ಸುರೇಶ್ ಹೇಳಿದ್ದಾರೆ.

**ಪ್ರವಾಸಕ್ಕೆ ತೆರಳುತ್ತಿರುವ ಶಾಸಕರ ಪಟ್ಟಿ**

ಪ್ರವಾಸಕ್ಕೆ ತೆರಳುತ್ತಿರುವ ಶಾಸಕರ ಪಟ್ಟಿಯಲ್ಲಿ ಎಚ್.ಡಿ.ತಮ್ಮಯ್ಯ, ಹಂಪನಗೌಡ ಬಾದರ್ಲಿ, ಬಿ.ದೇವೇಂದ್ರಪ್ಪ, ಯಶವಂತರಾಯಗೌಡ



ಪಾಟೀಲ್, ರಘುಮೂರ್ತಿ, ಬಿ.ಎಂ.ನಾಗರಾಜ, ಜೆ.ಟಿ.ಪಾಟೀಲ್, ಅಲ್ಲಮಪ್ರಭು ಪಾಟೀಲ್, ಸಿ.ಪುಟ್ಟರಂಗಶೆಟ್ಟಿ, ಬಸನಗೌಡ ಬಾದರ್ಲಿ, ಎ.ಆರ್.ಕೃಷ್ಣಮೂರ್ತಿ, ಬಸನಗೌಡ ತುರುವಿಹಾಳ್, ಎನ್.ಎಚ್. ಕೋನರೆಡ್ಡಿ ಸೇರಿದಂತೆ ಸುಮಾರು 13 ಶಾಸಕರು, ಎಂಎಲ್‌ಸಿಗಳ ಹೆಸರು ಹರಿದಾಡುತ್ತಿದೆ. ಈ ಮಧ್ಯೆ, ಕೋನರೆಡ್ಡಿ ಅವರು ತಾವು ಪ್ರವಾಸಕ್ಕ ಹೋಗುತ್ತಿಲ್ಲ ಎಂದು ಹೇಳಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# "ಅನಕ್ಷರಸ್ಥ ಬ್ರಾಹ್ಮಣ ಕಲ್ಲಿನಿಂದಲೂ ಹಣ ಗಳಿಸುತ್ತಾನೆ : ಶಿಕ್ಷಣ ವಂಚಿತರು ದುಡಿದ ಹಣವನ್ನು 'ಕಲ್ಲಿನ ಮೇಲೆ' ಸುರಿಯುತ್ತಾರೆ!!



ದಲಿತರನ್ನು ಮುಟ್ಟಿದರೆ ನಿಮ್ಮ ನೀರು ಅಶುದ್ಧವಾಗುವುದಾದರೆ, ದಲಿತರು ಹಿಂದೂಗಳಾಗಿರುವುದರಿಂದ ನಿಮ್ಮ ಧರ್ಮ ಯಾಕೆ ಅಶುದ್ಧವಾಗುವುದಿಲ್ಲ?

ಸಂವಿಧಾನವು ಮಹಿಳೆಯರಿಗೆ ರಾಷ್ಟ್ರಪತಿಯಾಗುವ ಅಧಿಕಾರ ನೀಡಿತು, ಇಲ್ಲದಿದ್ದರೆ ಧರ್ಮವು ಸ್ತನಗಳನ್ನು ಮುಚ್ಚಿಕೊಳ್ಳುವ ಅಧಿಕಾರವನ್ನೂ ಕಿತ್ತುಕೊಂಡಿತ್ತು!

ಸಂವಿಧಾನವನ್ನು ಓದಿ 99% ಬ್ರಾಹ್ಮಣರು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದರು, ಆದರೆ ಖಅ, ಖಖಿ, ಔಃಅ ವರ್ಗದವರಿಗೆ ನೀವು ದೇವಸ್ಥಾನಗಳಿಗೆ ಹೋಗುವುದರಿಂದ ನಿಮಗೆ ಮುಕ್ತಿ ಸಿಗುತ್ತದೆ ಎಂದು ನಂಬಿಸಿದ್ದಾರೆ.

"ಡಾ. ಅಂಬೇಡ್ಕರ್ ನಮ್ಮ ದೇಶದಲ್ಲಿ ಜನಿಸಿದ್ದರೆ, ನಾನು ಸೂರ್ಯನ ಹೆಸರನ್ನು ಬದಲಿಸಿ ಅಂಬೇಡ್ಕರ್ ಎಂದು ಇಡುತ್ತಿದ್ದೆ!" ಅಮೆರಿಕದ ಮಾಜಿ ರಾಷ್ಟ್ರಪತಿ.

ಧಾರ್ಮಿಕವಾಗಿರುವುದಕ್ಕಿಂತ ವಿದ್ಯಾವಂತರಾಗಿರುವುದು ಹೆಚ್ಚು ಮುಖ್ಯ, ಇಲ್ಲದಿದ್ದರೆ ಜನರು ಹಾಲನ್ನು ಬಿಟ್ಟು ಮೂತ್ರ ಕುಡಿಯುವುದನ್ನೂ ಸಂಪ್ರದಾಯ ಎಂದು ಕರೆಯುತ್ತಾರೆ.



ರೈತರು 13 ತಿಂಗಳುಗಳ ಕಾಲ ಬೀದಿಯಲ್ಲಿ ನಿಂತು ಹೋರಾಟ ಮಾಡಿದರು... ಸುಪ್ರೀಂ ಕೋರ್ಟ್ ಮಲಗಿತ್ತು. UGC ನಿಯಮಾವಳಿಗಳ ಮೇಲೆ 32 ದಿನ ವಿರೋಧ ವ್ಯಕ್ತವಾಯಿತು, ಸುಪ್ರೀಂ ಕೋರ್ಟ್ ಎಚ್ಚರವಾಯಿತು.

ಒಂದು ಮಾತು ಕೇಳಬೇಕಿತ್ತು; ದೇವಸ್ಥಾನದಿಂದ ಒಂದು ವೇಳೆ ದಾನದ ಪೆಟ್ಟಿಗೆಯನ್ನು ತೆಗೆದುಹಾಕಿದರೆ ಯಾರಿಗೆ ಕೋಪ ಬರುತ್ತದೆ? ದೇವರಿಗಾ ಅಥವಾ ಪೂಜಾರಿಗಾ?

ಸಂವಿಧಾನ ಬರೆದವರ ಬಳಿ 32 ಪದವಿಗಳು ಮತ್ತು 9 ಭಾಷೆಗಳ ಜ್ಞಾನವಿತ್ತು, ಇಂದು ಅನಕ್ಷರಸ್ಥ ವ್ಯಕ್ತಿ ಅದರಲ್ಲಿ ತಪ್ಪುಗಳನ್ನು ಹುಡುಕುತ್ತಿದ್ದಾನೆ!

ಒಂದು ವೇಳೆ ವಿಜ್ಞಾನವು ಪೋಲಿಯೋ ಲಸಿಕೆಯನ್ನು ಕಂಡುಹಿಡಿಯದಿದ್ದರೆ, ಭಕ್ತರು ಅಂಗವಿಕಲರಾಗಿ ಅಲೆಯುತ್ತಿದ್ದರು ಮತ್ತು ಇದೆಲ್ಲಾ 'ದೇವರ ಲೀಲೆ' ಎಂದು ಹೇಳುತ್ತಿದ್ದರು!

ಪ್ರಪಂಚದ ವಿನಾಶ ಯಾವಾಗ ಮತ್ತು ಹೇಗೆ ಆಗುತ್ತದೋ ತಿಳಿಯದು, ಆದರೆ ಭಾರತದ ವಿನಾಶಕ್ಕೆ ಹೊಣೆಗಾರರು ಕೆಟ್ಟ ರಾಜಕಾರಣಿಗಳು, ಮಾರಾಟವಾದ ದಲ್ಲಾಳಿ ಪತ್ರಕರ್ತರು ಮತ್ತು ನಿದ್ರಿಸುತ್ತಿರುವ ಜನತೆ ಕಾರಣ ಆಗಿರುತ್ತಾರೆ....!

ಯಾವ ಹೇಡಿಗಳು ಬ್ರಿಟಿಷರ ಮತ್ತು ಮೊಘಲರ ವಿರುದ್ಧ ಹೋರಾಡಲಾಗಲಿಲ್ಲವೋ, ಅವರು ದಲಿತರ ವಿರುದ್ಧ ಹೋರಾಡಿ ತಮ್ಮ ಗೌರವಾನ್ವಿತ ಇತಿಹಾಸವನ್ನು ಹೇಳಿಕೊಂಡು ಅಲೆಯುತ್ತಿದ್ದಾರೆ. 1948 ರಲ್ಲಿ ನಾಥೂರಾಮನಿಗೆ ಪಿಸ್ತೂಲು ಚಲಾಯಿಸಲು ತಿಳಿದಿತ್ತು, ಆದರೆ ಗುಲಾಮಗಿರಿಯ ಸರಪಳಿಯಲ್ಲಿ ಎಷ್ಟು ಬಂಧಿಯಾಗಿದ್ದನೆಂದರೆ ಒಬ್ಬನೇ ಒಬ್ಬ ಬ್ರಿಟಿಷನಿಗೆ ಒಂದು ಕಲ್ಲನ್ನೂ ಹೊಡೆಯಲು ಅವನಿಂದ ಸಾಧ್ಯವಾಗಲಿಲ್ಲ?

## ಆಚರಣೆಗಳಿಗಿಂತ ಅರಿವು ಮುಖ್ಯ.

ಹನುಮಾನ್ ಚಾಲೀಸಾದಿಂದ ಭೂತ, ಪ್ರೇತ, ಡಾಕಿಣಿ–ಶಾಕಿನಿಗಳು ಓಡಿಹೋಗಬಹುದು. ಆದರೆ ಜಾತಿ–ಪದ್ಧತಿ, ಭೇದಭಾವ, ಅಸಮಾನತೆ, ಮೂಢನಂಬಿಕೆ, ಪಾಖಂಡಿತನ, ಅಸ್ಪೃಶ್ಯತೆ, ಅತ್ಯಾಚಾರಿಗಳು, ಶೋಷಣೆ, ಬಡತನ ಮತ್ತು ಹಸಿವು ಇವ್ಯಾವುವೂ ಹೋಗುವುದಿಲ್ಲ..!

ಸತಿ ಪದ್ಧತಿ, ಸ್ತನ ತೆರಿಗೆ, ದೇವದಾಸಿ ಪದ್ಧತಿ, ಶುದ್ಧೀಕರಣ, ಬಾಲ್ಯ ವಿವಾಹ ಮತ್ತು ಅಸ್ಪೃಶ್ಯತೆ – ಇವು ಯಾವ ಮಹಾನ್ ಧರ್ಮದ ಶೋಧನೆಗಳಾಗಿದ್ದವು?

SC/ST/OBC ಸಮುದಾಯದವರು ಒಮ್ಮೆ ರಾಮಮಂದಿರ ಟ್ರಸ್ಟ್‌ನಲ್ಲಿ ಅರ್ಚಕರಾಗಲು ಅರ್ಜಿ ಸಲ್ಲಿಸಿ ನೋಡಿ, ತಾವು 'ಹಿಂದೂ' ಎಂಬ ಭ್ರಮೆ ತಾನಾಗಿಯೇ ದೂರವಾಗುತ್ತದೆ.

ಭಗತ್ ಸಿಂಗ್ ಅವರಿಗೆ ನೇಣು ಆಗಬಾರದೆಂದು ಪ್ರಯತ್ನಿಸಿದ ವ್ಯಕ್ತಿ ಮುಸಲ್ಮಾನರಾಗಿದ್ದರು, ಆದರೆ ಅವರಿಗೆ ನೇಣು ಕೊಡಿಸಲು ಸಾಕ್ಷಿ ನುಡಿದವರು ಒಬ್ಬ ಪಂಡಿತರಾಗಿದ್ದರು.

ಇತಿಹಾಸದಲ್ಲಿ ಸೇಡು ತೀರಿಸಿಕೊಳ್ಳುವ ಬದಲು ಸಮಾನತೆಯನ್ನು ಆರಿಸಿಕೊಂಡ ಆ ಕೋಟ್ಯಂತರ ದಲಿತರಿಗೆ ಧನ್ಯವಾದಗಳನ್ನು ಅರ್ಪಿಸಿ! ಅವರು ಸೇಡು ಬಯಸಿಲ್ಲ ಸಮಾನತೆ ಬಯಸಿದರು ಅಷ್ಟೇ.

ಸೇಡಿನ ಬದಲು ಸಮಾನತೆಯನ್ನು ಆರಿಸಿಕೊಂಡ" ಸಮುದಾಯದ ದೊಡ್ಡತನವನ್ನು ಗೌರವಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ.

ಆಸ್ಪತ್ರೆಯಲ್ಲಿ ರಕ್ತದ ಅವಶ್ಯಕತೆ ಬಿದ್ದಾಗ ಧರ್ಮ ಮತ್ತು ಜಾತಿಯ ಅಮಲು ಇಳಿದು ಹೋಗುತ್ತದೆ. ಅಂಟಿಸಿ ಬಿಡಿ ರಕ್ತದ ಬಾಟಲಿಗಳ ಮೇಲೂ ಜಾತಿ–ಧರ್ಮದ ಲೇಬಲ್ ನೋಡೇ ಬಿಡುವ ಜಾತಿ–ಧರ್ಮಗಳ ಅಭಿಮಾನ ಎಷ್ಟಿದೆಯೋ!

ಸಮಾಜದ ಹೆಣ್ಣುಮಕ್ಕಳಿಗೆ ಶಿಕ್ಷಣದ ಅಗತ್ಯವಿದೆಯೇ ಹೊರತು ಉಪವಾಸ ವ್ರತಗಳದ್ದಲ್ಲ; ಏಕೆಂದರೆ ಸಂಬಂಧ ಬೆಳೆಸುವಾಗ ಪದವಿಗಳನ್ನು ಕೇಳುತ್ತಾರೆಯೇ ವಿನಃ ವ್ರತಗಳನ್ನಲ್ಲ.

ನಾನು ಇದುವರೆಗೆ ಯಾವುದೇ ಕೋಟ್ಯಧಿಪತಿ ಸ್ತ್ರೀ ಅಥವಾ ಪುರುಷನ ಮೈಮೇಲೆ ದೇವರು ಬರುವುದನ್ನು ನೋಡಿಲ್ಲ; ದೇವರುಗಳು ಕೇವಲ ಬಡವರ ಮೇಲೆ ಮಾತ್ರ ಬರುತ್ತಾರೆ..!

ಶ್ರೀರಾಮನು ವಾನರ ಸೇನೆಯನ್ನು ಕರೆದುಕೊಂಡು ಲಂಕೆಗೆ ಹೋಗಿದ್ದು ಒಳ್ಳೆಯದಾಯಿತು. ಒಂದು ವೇಳೆ ಮನುಷ್ಯರನ್ನು ಕರೆದುಕೊಂಡು ಹೋಗಿದ್ದರೆ, ಬಂಗಾರದ ಲಂಕೆಯನ್ನು ಕಂಡು ಅರ್ಧದಷ್ಟು ಜನ ರಾವಣನ ಪರವಾಗಿಯೇ ನಿಂತುಬಿಡುತ್ತಿದ್ದರು...!!

ಯಾವ ದಲಿತರು ದೇವಸ್ಥಾನಗಳಲ್ಲಿ ದೇವರನ್ನು ಹುಡುಕುತ್ತಿದ್ದಾರೋ, ಒಂದು ವೇಳೆ ಬಾಬಾಸಾಹೇಬರು ಇರದೇ ಹೋಗಿದ್ದರೆ ಅವರು ಕಸದ ತೊಟ್ಟಿಯಲ್ಲಿ ಆಹಾರವನ್ನು ಹುಡುಕುತ್ತಿರುತ್ತಿದ್ದರು. ಅರಿವಿನ ಅಂಗಳ ಬಹಳ ದೊಡ್ಡದಿದೆ ಹೆಜ್ಜೆತ್ತು ನಡೆದರೆ ಸಿಗುವುದು ಎಲ್ಲಾದಕ್ಕು ಮುಕ್ತಿ




ನೀಲ

# 2050 ರ ವೇಳೆಗೆ ಭಾರತದಲ್ಲಿ 'ಬಿಸಿಲ ಬೇಗೆ' ದುಪ್ಪಟ್ಟು : ಆಕ್ಸ್'ಫರ್ಡ್ ಅಧ್ಯಯನ

2050ರ ವೇಳೆಗೆ ಭೂಮಿಯ ತಾಪಮಾನವು ದ್ವಿಗುಣಗೊಳ್ಳುವ ಸಾಧ್ಯತೆಯಿದೆ ಎಂಬ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಇತ್ತೀಚಿನ ಅಧ್ಯಯನವು ಜಾಗತಿಕ ಮಟ್ಟದಲ್ಲಿ ತಲ್ಲಣ ಮೂಡಿಸಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಶೋಧಕರು ನಡೆಸಿರುವ ಹೊಸ ಅಧ್ಯಯನವೊಂದು ಜಾಗತಿಕ ತಾಪಮಾನ ಏರಿಕೆಯ ಬಗ್ಗೆ ಗಂಭೀರ ಎಚ್ಚರಿಕೆ ನೀಡಿದೆ.

ಮುಂದಿನ ಕೆಲವು ದಶಕಗಳಲ್ಲಿ ಶತಕೋಟಿ ಜನರು ಅಪಾಯಕಾರಿ ಮಟ್ಟದ ಉಷ್ಣಾಂಶಕ್ಕೆ ತುತ್ತಾಗಲಿದ್ದಾರೆ ಎಂದು ಈ ವರದಿ ತಿಳಿಸಿದೆ. ಈ ವಿಶ್ಲೇಷಣೆಯ ಪ್ರಕಾರ, ಜಾಗತಿಕ ಸರಾಸರಿ ತಾಪಮಾನವು ಕೈಗಾರಿಕಾ ಪೂರ್ವ ಮಟ್ಟಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾದರೆ, 2050ರ ವೇಳೆಗೆ ವಿಶ್ವದ ಅರ್ಧದಷ್ಟು ಜನಸಂಖ್ಯೆ ಅಂದರೆ ಸುಮಾರು 3.79 ಶತಕೋಟಿ ಜನರು ವಿಪರೀತ ಶಾಖದ ಪರಿಸ್ಥಿತಿಯಲ್ಲಿ ಬದುಕಬೇಕಾಗುತ್ತದೆ.

ಪ್ರಮುಖ ಅಂಶಗಳು:

ಶೀಘ್ರದಲ್ಲೇ ಪರಿಣಾಮ: ಪ್ಯಾರಿಸ್ ಒಪ್ಪಂದದ 1.5 ಡಿಗ್ರಿ ಸೆಲ್ಸಿಯಸ್ ಮಿತಿಯನ್ನು ತಲುಪುವ ಮೊದಲೇ ಇದರ ತೀವ್ರ ಪರಿಣಾಮಗಳು ಕಂಡುಬರಲಿವೆ. 2010 ರಲ್ಲಿ ವಿಶ್ವದ ಶೇ. 23ರಷ್ಟು ಜನಸಂಖ್ಯೆಯ ಮೇಲೆ ಶಾಖದ ಪರಿಣಾಮವಿತ್ತು, ಆದರೆ ಶೀಘ್ರದಲ್ಲೇ ಇದು ಶೇ. 41ಕ್ಕೆ ಏರಲಿದೆ ಎಂದು 'ನೇಚರ್ ಸಸ್ಟೈನಬಿಲಿಟಿ' ಜರ್ನಲ್‌ನಲ್ಲಿ ಪ್ರಕಟವಾದ ವರದಿ ಹೇಳಿದೆ.

ಭಾರತಕ್ಕೆ ಅತಿ ಹೆಚ್ಚು ಹಾನಿ: ಬ್ರೆಜಿಲ್ ಮತ್ತು ನೈಜೀರಿಯಾದಂತಹ ದೇಶಗಳಲ್ಲಿ ಶಾಖದ ತೀವ್ರತೆ ವೇಗವಾಗಿ ಹೆಚ್ಚಾಗಲಿದೆ. ಆದರೆ, ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ, ಇಂಡೋನೇಷ್ಯಾ, ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳಲ್ಲಿ ಅತಿ ಹೆಚ್ಚು ಜನರು ಇದರಿಂದ ಬಾಧಿತರಾಗಲಿದ್ದಾರೆ.

ತಂಪಾದ ದೇಶಗಳಿಗೂ ಅಪಾಯ: ಕೆನಡಾ, ಆಸ್ಟ್ರಿಯಾ, ಬ್ರಿಟನ್ ಮತ್ತು ಫಿನ್ಲೆಂಡ್‌ನಂತಹ ತಂಪಾದ ಹವಾಮಾನ ಹೊಂದಿರುವ ದೇಶಗಳೂ




ಇದರಿಂದ ಪಾರಾಗಲು ಸಾಧ್ಯವಿಲ್ಲ. ನಾರ್ವೆ ಮತ್ತು ಐರ್ಲೆಂಡ್‌ನಲ್ಲಿ ಬಿಸಿ ದಿನಗಳ ಸಂಖ್ಯೆ ಶೇ. 200 ಕ್ಕಿಂತ ಹೆಚ್ಚು ಏರಿಕೆಯಾಗಬಹುದು.

ಕೂಲಿಂಗ್ ಬೇಡಿಕೆ ಹೆಚ್ಚಳ:

ಸಂಶೋಧನಾ ತಂಡದ ಮುಖ್ಯಸ್ಥ ಡಾ. ಜೀಸಸ್ ಲಿಜಾನಾ ಅವರ ಪ್ರಕಾರ, ತಾಪಮಾನವು 1.5 ಡಿಗ್ರಿ ಮಿತಿಯನ್ನು ತಲುಪುವ ಮೊದಲೇ ನಮಗೆ ಹವಾನಿಯಂತ್ರಣದ (ಯಿಡಿ–ಛಿಠಿಟಿಜುಣುಠಿಟುಟಿಠಿ) ಅವಶ್ಯಕತೆ ಹೆಚ್ಚಾಗಲಿದೆ. "ಮುಂದಿನ ಐದು ವರ್ಷಗಳಲ್ಲಿ ಲಕ್ಷಾಂತರ ಮನೆಗಳಿಗೆ ಎಸಿ ಅಳವಡಿಸಬೇಕಾದ ಅನಿವಾರ್ಯತೆ ಬರಬಹುದು" ಎಂದು ಅವರು ಎಚ್ಚರಿಸಿದ್ದಾರೆ.

ಆಕ್ಸ್‌ಫರ್ಡ್ ಮಾರ್ಟಿನ್ ಫ್ಯೂಚರ್ ಆಫ್ ಕೂಲಿಂಗ್ ಪ್ರೋಗ್ರಾಂನ ನಾಯಕಿ ಡಾ. ರಾಧಿಕಾ ಖೋಸ್ಲಾ ಮಾತನಾಡಿ, "ಈ ಸಂಶೋಧನೆಯು ಪ್ರತಿಯೊಬ್ಬರಿಗೂ 'ಎಚ್ಚರಿಕೆ ಗಂಟೆ' ಆಗಿರಬೇಕು. ತಾಪಮಾನ ಏರಿಕೆಯು ಶಿಕ್ಷಣ, ಆರೋಗ್ಯ, ಕೃಷಿ ಮತ್ತು ವಲಸೆಯ ಮೇಲೆ ಹಿಂದೆಂದೂ ಕಂಡಿರದ ಪ್ರಭಾವ ಬೀರಲಿದೆ. ರಾಜಕಾರಣಿಗಳು ತಕ್ಷಣವೇ ಸುಸ್ಥಿರ ಅಭಿವೃದ್ಧಿಯತ್ತ ಗಮನಹರಿಸುವುದು ಅನಿವಾರ್ಯ" ಎಂದು ತಿಳಿಸಿದ್ದಾರೆ.

ಹವಾಮಾನ ಬದಲಾವಣೆಯ ಈ ಭೀಕರ ಪರಿಣಾಮಗಳನ್ನು ತಡೆಗಟ್ಟಲು ಆಕ್ಸ್‌ಫರ್ಡ್ ಅಧ್ಯಯನ ಮತ್ತು ಜಾಗತಿಕ ಪರಿಸರ ವಿಜ್ಞಾನಿಗಳು ಸರ್ಕಾರಗಳಿಗೆ ಸೂಚಿಸಿರುವ ಪ್ರಮುಖ ಕ್ರಮಗಳು ಇಲ್ಲಿವೆ:

ಇಂಗಾಲದ ಹೊರಸೂಸುವಿಕೆ ಇಳಿಕೆ

ಪಳೆಯುಳಿಕೆ ಇಂಧನಗಳ ಬಳಕೆ ಕಡಿಮೆ: ಕಲ್ಲಿದ್ದಲು, ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಆದಷ್ಟು ಬೇಗ ನಿಲ್ಲಿಸಿ, ಸೌರಶಕ್ತಿ ಮತ್ತು ಗಾಳಿ ಶಕ್ತಿಯಂತಹ ನವೀಕರಿಸಬಹುದಾದ ಇಂಧನಗಳ ಕಡೆಗೆ ಗಮನಹರಿಸುವುದು.

ಕೈಗಾರಿಕಾ ಸುಧಾರಣೆ: ಕೈಗಾರಿಕೆಗಳಿಂದ ಹೊರಬರುವ ವಿಷಕಾರಿ ಅನಿಲಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದು. ಸುಸ್ಥಿರ ಕಟ್ಟಡ ವಿನ್ಯಾಸ

ತಂಪಾದ ಮನೆಗಳು: ಭವಿಷ್ಯದ ಶಾಖವನ್ನು ತಡೆದುಕೊಳ್ಳಲು ಕಟ್ಟಡಗಳ ವಿನ್ಯಾಸ ಬದಲಾಗಬೇಕು. ಗಾಳಿ ಸಂಚಾರ ಹೆಚ್ಚಿರುವ ಮತ್ತು ಶಾಖವನ್ನು ಹೀರಿಕೊಳ್ಳದ ಕಾಂಕ್ರೀಟ್ ಬದಲಿಗೆ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಿ ಮನೆಗಳನ್ನು ನಿರ್ಮಿಸುವುದು.

ನಗರ ಯೋಜನೆ: ನಗರಗಳಲ್ಲಿ ಸಿಮೆಂಟ್ ಕಾಡುಗಳ ಬದಲಿಗೆ ಹೆಚ್ಚು ಉದ್ಯಾನವನಗಳು ಮತ್ತು ಕೆರೆಗಳನ್ನು ನಿರ್ಮಿಸಿ 'ಅರ್ಬನ್ ಹೀಟ್ ಐಲ್ಯಾಂಡ್' ಪ್ರಭಾವವನ್ನು ಕಡಿಮೆ ಮಾಡುವುದು.

ಕೃಷಿ ಮತ್ತು ಆಹಾರ ಭದ್ರತೆ

ಬರ ನಿರೋಧಕ ತಳಿಗಳು: ವಿಪರೀತ ಬಿಸಿಲನ್ನು ತಡೆದುಕೊಳ್ಳಬಲ್ಲ ಬೆಳೆಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹ ಮತ್ತು ತಾಂತ್ರಿಕ ನೆರವು ನೀಡುವುದು.



ನೀರಿನ ನಿರ್ವಹಣೆ: ಅಂತರ್ಜಲ ಮಟ್ಟ ಹೆಚ್ಚಿಸಲು ಮಳೆನೀರು ಕೊಯ್ಲು ಮತ್ತು ಹನಿ ನೀರಾವರಿ ಪದ್ಧತಿಯನ್ನು ಕಡ್ಡಾಯಗೊಳಿಸುವುದು.

ಆರೋಗ್ಯ ರಕ್ಷಣಾ ವ್ಯವಸ್ಥೆ

ಹೀಟ್ ಆಕ್ಷನ್ ಪ್ಲಾನ್ ಬೀಸುವ ಸಮಯದಲ್ಲಿ ಜನರನ್ನು ರಕ್ಷಿಸಲು ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆ ಮಾಡುವುದು.

ಬಿಸಿಲಿನಿಂದ ಉಂಟಾಗುವ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಆಸ್ಪತ್ರೆಗಳಲ್ಲಿ ವಿಶೇಷ ವಿಭಾಗಗಳನ್ನು ತೆರೆಯುವುದು.

ಹಸಿರೀಕರಣ ಕಾಡುಗಳ ನಾಶವನ್ನು ತಡೆಗಟ್ಟುವುದು ಮತ್ತು ಖಾಲಿ ಇರುವ ಜಾಗಗಳಲ್ಲಿ ದೊಡ್ಡ ಮಟ್ಟದ ಅರಣ್ಯೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಗಿಡಮರಗಳು ನೈಸರ್ಗಿಕವಾಗಿ ತಾಪಮಾನವನ್ನು ಕಡಿಮೆ ಮಾಡುವ ಶಕ್ತಿ ಹೊಂದಿವೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ರಾಮನಗರ ಸುದ್ದಿ ಕಾರ್ನರ್

## ಶಾಸಕ ಎಚ್.ಸಿ.ಬಾಲಕೃಷ್ಣರಿಂದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಲೋಕಾರ್ಪಣೆ



ರಾಮನಗರ: ಬಿಡದಿ ಹೋಬಳಿ ಮಂಚನಾಯ್ಕನಹಳ್ಳಿ ಗ್ರಾಪಂ ವ್ಯಾಪ್ತಿಯ ನಾನಾ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ನೂತನ ಕಟ್ಟಡಗಳ ಉದ್ಘಾಟನೆಯನ್ನು ಕೆಆರ್‌ಡಿಸಿಎಲ್ ಅಧ್ಯಕ್ಷರು ಆದ ಶಾಸಕ ಎಚ್.ಸಿ.ಬಾಲಕೃಷ್ಣ ಮಂಗಳವಾರ ನೆರವೇರಿಸಿದರು.

ಮಂಚನಾಯ್ಕನಹಳ್ಳಿ ಗ್ರಾಪಂ ವ್ಯಾಪ್ತಿಯ ಹೆಜ್ಜಾಲ ಗ್ರಾಮದಲ್ಲಿ ಆರೋಗ್ಯ ಇಲಾಖೆ ವತಿಯಿಂದ 65 ಲಕ್ಷ ರೂಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲು ಉದ್ದೇಶಿಸಿರುವ ಆಯುಷ್ಮಾನ್ ಆರೋಗ್ಯ ಮಂದಿರದ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕರು ಗುದ್ದಲಿ ಪೂಜೆ ಮಾಡಿದರು.

ಈ ವೇಳೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್.ನಟರಾಜು, ನಿರ್ದೇಶಕರಾದ ಪುಟ್ಟಯ್ಯ, ನರಸಿಂಹಯ್ಯ, ಬಿಎಂಐಸಿಪಿ ನಿರ್ದೇಶಕ ಅಬ್ಬನಕುಪ್ಪೆ ರಮೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಯು.ನರಸಿಂಹಯ್ಯ, ಮಂಚನಾಯ್ಕನಹಳ್ಳಿ ಗ್ರಾಪಂ ಅಧ್ಯಕ್ಷೆ ಪವಿತ್ರಬಸವರಾಜು, ಉಪಾಧ್ಯಕ್ಷೆ ತಾಯಮ್ಮ ರಂಗಸ್ವಾಮಿ, ಸದಸ್ಯರಾದ ಶಾಂತರಾಜು, ಕಾಳಪ್ಪ, ಗೋವಿಂದರಾಜು, ಸತೀಶ್‌ಕುಮಾರ್, ವರಲಕ್ಷ್ಮಿ ಗೋವಿಂದಾಜು, ಮಹೇಶ್‌ಕುಮಾರ್, ಮಾಜಿ ಸದಸ್ಯರಾದ ವೀರಭದ್ರಯ್ಯ, ಗೋವಿಂದಯ್ಯ, ವೆಂಕಟರಮಣ, ವೆಂಕಟೇಶ್, ಶೇಷಗಿರಿಹಳ್ಳಿ ಶಿವಣ್ಣ ಮುಂತಾದವರು ಇದ್ದರು.

ಮಂಚನಾಯ್ಕನಹಳ್ಳಿ ಗ್ರಾಪಂ ವ್ಯಾಪ್ತಿಯ ಪಿಚ್ಚಗುಂಟರಪಾಳ್ಯದಲ್ಲಿ ಗ್ರಾಪಂ ವರ್ಗ–1ರ ಅನುದಾನದಡಿ 50 ಲಕ್ಷ ರೂ.ವೆಚ್ಚದಲ್ಲಿ ನಿರ್ಮಿಸಿರುವ ಕೌಶಲ್ಯ ಅಭಿವೃದ್ಧಿ ಕೇಂದ್ರ ಹಾಗೂ ಸಂಪನ್ಮೂಲ ಕೇಂದ್ರದ ನೂತನ ಕಟ್ಟಡವನ್ನು ಶಾಸಕ ಎಚ್.ಸಿ.ಬಾಲಕೃಷ್ಣ ಲೋಕಾರ್ಪಣೆ ಮಾಡಿದರು. ಶ್ಯಾನುಮಂಗಲದ ಮಂದೆಬಯಲು ಗ್ರಾಮದಲ್ಲಿ ಗ್ರಾಪಂ ವರ್ಗ–1ರ ಅಡಿಯಲ್ಲಿ ನಿರ್ಮಿಸಿರುವ ಭಜನೆ ಮಂದಿರವನ್ನು ಶಾಸಕರು ಪೂಜೆ ಸಲ್ಲಿಸುವ ಮೂಲಕ ಲೋಕಾರ್ಪಣೆಗೊಳಿಸಿದರು. ಈ ವೇಳೆ ಗ್ರಾಮದಲ್ಲಿನ ಕೆಲವು ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಕುರಿತು ಹಾಗೂ ಇ–ಖಾತೆ ಸಮಸ್ಯೆ ಬಗೆಹರಿಸುವಂತೆ ಹಾಗೆಯೇ ಗ್ರಾಮಕ್ಕೆ ನೂತನವಾಗಿ ಸಿಸಿ ಚರಂಡಿ ನಿರ್ಮಿಸಿಕೊಡುವಂತೆ ಗ್ರಾಮಸ್ಥರು ಮತ್ತು ಮುಖಂಡರು ಶಾಸಕರಲ್ಲಿ ಮನವಿ ಮಾಡಿದರು. ಮನವಿ ಸ್ಪಂದಿಸಿದ ಶಾಸಕರು ಶೀಘ್ರವೇ ಹಕ್ಕುಪತ್ರ ದೊರಕಿಸುವ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಭರವಸೆ ನೀಡಿದರು.

ಈ ವೇಳೆ ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜು, ಕೆಪಿಸಿಸಿ ಸದಸ್ಯ ಬ್ಯಾಟಪ್ಪ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಲ್.ಚಂದ್ರಶೇಖರ್, ಗ್ರಾಪಂ ಮಾಜಿ ಅಧ್ಯಕ್ಷ ಬೆಟ್ಟಸ್ವಾಮಿ, ಪುರಸಭೆ ಸದಸ್ಯ ಸಿ.ಉಮೇಶ್, ಗ್ರಾಪಂ ಅಧ್ಯಕ್ಷೆ ಪವಿತ್ರಬಸವರಾಜು, ಉಪಾಧ್ಯಕ್ಷೆ ತಾಯಮ್ಮ, ಸದಸ್ಯರಾದ ಪೆಪ್ಸಿಸಂಪತ್, ವೇಣುಗೋಪಾಲ್, ರಮ್ಯಧನಂಜಯ, ಪುಟ್ಟರಂಗಯ್ಯ, ಮುಖಂಡರಾದ ಎಚ್.ಎಸ್.ಯೋಗಾನಂದ, ಶೇಷಗಿರಿಹಳ್ಳಿ ಶಿವಣ್ಣ, ದೇವರಾಜು, ಸುಜ್ಞಾನಮೂರ್ತಿ, ಆರ್.ಸ್ವಾಮಿ, ಅಂಚೀಪುರಶೇಖರ್, ರಾಮನಹಳ್ಳಿ ಕುಮಾರ್, ಪಿಡಿಒ ಚಂದ್ರಶೇಖರ್, ಶಾಸಕರ ಆಪ್ತ ಸಹಾಯಕ ಅಭಿಷೇಕ್ ಮತ್ತಿತರರು ಇದ್ದರು.

## ಜೀವನಕ್ಕೆ ಹಣಕ್ಕಿಂತ ಶಿಕ್ಷಣ ಮುಖ್ಯ :ಮಕ್ಕಳಿಗೆ ಹಣದ ವ್ಯಾಮೋಹ ಬೇಡ



ತುಮಕೂರು: ಮಕ್ಕಳಿಗೆ ಹಣದ ವ್ಯಾಮೋಹ ಬೆಳೆಸಬೇಡಿ. ಬದಲಾಗಿ ಗುಣ ಮತ್ತು ಉತ್ತಮ ಶಿಕ್ಷಣ ನೀಡುವುದು ಪೋಷಕರ ಮತ್ತು ಗುರುಗಳ ಜವಾಬ್ದಾರಿ ಎಂದು ಕ್ಯಾತ್ಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರಂಗನಾಥ್ ಕೆ.ಎಸ್. ಹೇಳಿದರು.ನಗರದ ಕ್ಯಾತ್ಸಂದ್ರದ ಮೈದಾಳ ರಸ್ತೆಯಲ್ಲಿರುವ ಜ್ಞಾನಗಂಗಾ ವಿದ್ಯಾ ಕೇಂದ್ರ ಶಾಲೆಯಲ್ಲಿ ನಡೆದ ಜ್ಞಾನ ಮಹೋತ್ಸವ ಶಾಲಾ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ಮಕ್ಕಳಿಗೆ ಶಾಲಾ ಹಂತದಲ್ಲೇ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ನೀಡಿ ಬೆಳೆಸಬೇಕು. ಇದರ ಹೊಣೆ ಶಿಕ್ಷಕರು ಮತ್ತು ಪೋಷಕರ ಮೇಲಿದೆ. ಇದನ್ನು ನಾವೆಲ್ಲರೂ ಅರ್ಥ ಮಾಡಿಕೊಂಡು ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಸಲಹೆ ನೀಡಿದರು.

ಸಂಸ್ಥೆಯ ಅಧ್ಯಕ್ಷರಾದ ಡಾ.ಎಸ್. ನರೇಂದ್ರಕುಮಾರ್ ಅವರು ಶಾಲೆಯ 2025–26 ನೇ ಸಾಲಿನ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ, ಶಾಲೆಯ ಆರಂಭದಿಂದ ಹಿಡಿದು ಇಂದಿನವರೆಗೂ ನಡೆದ ಶೈಕ್ಷಣಿಕ ವಿಚಾರಗಳನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮೋಹಿತ್ ಎನ್. ಕುಮಾರ್ ಕಾರ್ಯದರ್ಶಿಗಳು ಹಾಗೂ ಲಾವಣ್ಯ ಜಂಟಿ ಕಾರ್ಯದರ್ಶಿಗಳು, ನಿಷಾಂತ್ ಶಾನ್ಭೋಗ್ ಆಡಳಿತಾಧಿಕಾರಿ ಜ್ಞಾನಗಂಗಾ ವಿದ್ಯಾ ಕೇಂದ್ರ, ಡಾ. ನಾಗರಾಜ್ ಸಿ.ಎ. ತಿಪ್ಪೇಸ್ವಾಮಿ ಹೆಚ್., ಬಾಲಾಜಿ,ಕೆ. ಶಶಿಕಲಾ ಹೆಚ್.ಕೆ. ರಂಗನಾಥ್, ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು, ನಿರ್ದೇಶಕರು, ಮುಖ್ಯೋಪಾಧ್ಯಾಯರುಗಳಾದ ತಿರುಮಲ ಟಿ ಆರ್ , ಮತ್ತು ಡಾ ಸುಧಾಕರ್ ಹಾಗೂ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗದವರು, ಪೋಷಕರು,ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಅತ್ಯಂತ ವಿಜೃಂಭಣೆಯಿಂದ ಯಶಸ್ವಿಯಾಗಿ ನೆರವೇರಿಸಿದರು.



## ಸರ್ಕಾರಿ ಅಧಿಕಾರಿಗಳಿಗೆ ಅಂತರರಾಷ್ಟ್ರೀಯ ಮಟ್ಟದ ತರಬೇತಿ ಮತ್ತು ಕ್ಷೇತ್ರ ಭೇಟಿ.

ಶಿರಾ : ದಕ್ಷಿಣ ಕೊರಿಯಾದ ಸಿಯೋಲ್ ಮತ್ತು ಇತರ ಆಡಳಿತಾತ್ಮಕ ಸಂಸ್ಥೆಗಳಿಗೆ ಅಂತರರಾಷ್ಟ್ರೀಯ ಎಕ್ಸ್ಪೋಸರ್ ಭೇಟಿಯು (International exposure visit to 'Seoul and other administrative institutes of South Korea) ಕರ್ನಾಟಕ ರಾಜ್ಯದ ಸುಮಾರು 20ಕ್ಕೂ ವಿವಿಧ ಇಲಾಖೆಗಳಿಂದ ಅಧಿಕ ಅಧಿಕಾರಿಗಳನ್ನು ಸರ್ಕಾರವು ಆಯ್ಕೆ ಮಾಡಿ, ಸಾರ್ವಜನಿಕ ಕಾರ್ಯಸೂಚಿ ಮತ್ತು ಆಡಳಿತ ('Public policy and governance) ವಿಷಯವಾಗಿ ಒಂದು ತಿಂಗಳ ತರಬೇತಿ ಆಯೋಜಿಸಿ ಅದರ ಭಾಗವಾಗಿ ದಕ್ಷಿಣ ಕೊರಿಯಾ ದೇಶದ ರಾಜಧಾನಿ ಸಿಯೋಲ್ ನಗರ ಹಾಗೂ ಇತರೆ ಪ್ರಮುಖ ಆಡಳಿತಾತ್ಮಕ ಸಂಸ್ಥೆಗಳಿಗೆ ಕಳೆದ ಒಂದು ವಾರ ಕಾಲ ಅಂತರರಾಷ್ಟ್ರೀಯ ಕ್ಷೇತ್ರ ಭೇಟಿ ಕೈಗೊಂಡ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ನಮ್ಮ ಶಿರಾ ತಾಲ್ಲೂಕು ಪಂಚಾಯಿತಿ ಕ್ರಿಯಾಶೀಲಾ ಕಾರ್ಯನಿರ್ವಹಣಾಧಿಕಾರಿ ಹರೀಶ್ ಇಲಾಖೆಯನ್ನು ಪ್ರತಿನಿಧಿಸಿ ಈ ತರಬೇತಿಯಲ್ಲಿ ದಕ್ಷಿಣ ಕೊರಿಯಾದ ಮುಂದುವರಿದ ಆಡಳಿತಾತ್ಮಕ ಮಾದರಿಗಳು, ತಂತ್ರಜ್ಞಾನ ಹಾಗೂ ವಿವಿಧ ಕ್ಷೇತ್ರಗಳನ್ನು ಅಧ್ಯಯನ ಮಾಡುವುದಾಗಿದೆ.

## ಬಾನಂದೂರು ಬಳಿ 3 ಕಾಡಾನೆಗಳು ಪ್ರತ್ಯಕ್ಷ ರೈತರು–ಸಾರ್ವಜನಿಕರಲ್ಲಿ ಆತಂಕ



ರಾಮನಗರ: ಬಿಡದಿಯ ಬಾನಂದೂರು–ಗೊಲ್ಲಹಳ್ಳಿ ಗ್ರಾಮಗಳ ನಡುವೆ ಇರುವ ನಲ್ಲಿಗುಡ್ಡ ಹಳ್ಳದ ಚೆಕ್‌ಡ್ಯಾಂ ಬಳಿ ಮಂಗಳವಾರ ಮೂರು ಕಾಡಾನೆಗಳು ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕವನ್ನುಂಟುಮಾಡಿವೆ.

ತಾಲ್ಲೂಕಿನ ಬಿಡದಿ ಪಟ್ಟಣಕ್ಕೆ ಕೂಗಳತೆ ದೂರದಲ್ಲಿರುವ ಗೊಲ್ಲಹಳ್ಳಿ ಗೇಟ್ ಬಳಿಯಿರುವ ನಲ್ಲಿಗುಡ್ಡೆ ಕೆರೆ ಕೋಡಿಹಳ್ಳದ ಬಳಿ ಹಾಡುಹಗಲಲ್ಲೇ ಮೂರು ಕಾಡಾನೆಗಳಿರುವುದು ಕಂಡುಬಂದಿದೆ. ಇದನ್ನು ಗಮನಿಸಿದ ಸ್ಥಳೀಯರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದರು.

ಕಾಡಾನೆಗಳು ಹಂದಿಗೊಂದಿ ಅರಣ್ಯ ಪ್ರದೇಶದಿಂದ ಸೋಮವಾರ ರಾತ್ರಿ ಆಹಾರವನ್ನರಸಿ ಕೆಂಪನಹಳ್ಳಿ ಮಾರ್ಗವಾಗಿ ಬಂದಿದ್ದು, ಅಕ್ಕಪಕ್ಕದ ಜಮೀನುಗಳಿಗೆ ಹೋಗದಂತೆ ಅರಣ್ಯ ಇಲಾಖೆ ಸಿಬ್ಬಂದಿಗಳು ಕ್ರಮವಹಿಸಿದ್ದರು.

ಕೆಲವು ದಿನಗಳ ಹಿಂದೆಯಷ್ಟೇ ತೊರೆದೊಡ್ಡಿ(ಇಟ್ಟಮಡು) ಗ್ರಾಮದ ಸಮೀಪ ಮುದುವಾಡಿ–ಬಿಡದಿ ಮುಖ್ಯರಸ್ತೆಯ ತೋಟವೊಂದರಲ್ಲಿ 3 ಆನೆಗಳು ಕಾಣಿಸಿಕೊಂಡು ರೈತರು ಮತ್ತು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದವು. ಈಗ ಅದೇ ಮೂರು ಆನೆಗಳು ಆಹಾರ ಅರಸಿಕೊಂಡು ಮತ್ತೆ ಬಯಲಿಗೆ ಬಂದಿವೆ. ರೈತರ ತೋಟಗಳಲ್ಲಿ ಬೆಳೆದಿದ್ದ ಫಸಲುಗಳನ್ನ ತಿಂದು ರುಚಿಕಂಡಿರುವ ಆನೆಗಳು ಕಾಡಿಗೆ ತೆರಳದೆ ತೋಟಗಳಲ್ಲಿಯೇ ಬೀಡುಬಿಟ್ಟಿವೆ. ವಿಷಯ ತಿಳಿದ ಅರಣ್ಯ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಆಗಮಿಸಿ, ಆನೆಗಳು ಸ್ಥಳಬಿಟ್ಟು ಬೇರೆಡೆಗೆ ಹೋಗದಂತೆ ನಾಕಬಂದಿ ನಿರ್ಮಿಸಿ ಕಟ್ಟೆಚ್ಚರ ವಹಿಸಿದ್ದರು. ಆನೆಗಳನ್ನು ರಾತ್ರಿ ವೇಳೆಯಲ್ಲಿ ಕಾಡಿಗೆ ಓಡಿಸಲು ಸಲಕ ಸಿದ್ಧತೆ ಮಾಡಿಕೊಂಡಿರುವುದಾಗಿ ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.

ಬಿಡದಿ ಪಟ್ಟಣದ ಸಮೀಪಕ್ಕೆ ಕಾಡಾನೆಗಳು ಬಂದಿರುವ ಸುದ್ದಿತಿಳಿದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಆನೆಗಳನ್ನು ದೂರದಿಂದ ಕಂಡು ಕುತೂಹಲ ತಣಿಸಿಕೊಂಡರು.

## ವಿವಿಧ ಬೇಡಿಕೆಗಳ ಈಡೇರಿಕೆಗೆ ರೈತಸಂಘದಿಂದ ತಾಲ್ಲೂಕು ಆಡಳಿತ ಸೌಧದ ಮುಂಭಾಗ ಪ್ರತಿಭಟನೆ



ತಿಪಟೂರು,ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ (ಸಾಮೂಹಿಕ ನಾಯಕತ್ವ) ವತಿಯಿಂದ ತಾಲ್ಲೂಕು ಆಡಳಿತ ಸೌಧದ ಮುಂಭಾಗ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾನಂತರ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಹಾಗೂ ತೋಟಗಾರಿಕೆ, ಬೆಸ್ಕಾಂ, ಅಬಕಾರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಪ್ರತ್ಯೇಕವಾಗಿ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ತೋಟಗಾರಿಕಾ ಇಲಾಖೆಗೆ ತೆಂಗಿಗೆ ವ್ಯಾಪಕ ರೋಗಬಾಧೆ ಹೆಚ್ಚಾಗಿದ್ದು, ಮರಗಳು ಹಾನಿಗೊಳಗಾಗಿ ಇಳುವರಿ ಭಾರೀ ಕುಸಿತವಾಗಿದೆ. ಸೂಕ್ತ ಔಷಧಿಗಳ ಕೊರತೆ ಯಿದ್ದು ಅಧಿಕಾರಿಗಳು ತೋಟಗಳಿಗೆ ಬೇಟಿ ನೀಡಿ ಅಧ್ಯಯನ ಪರಿಶೀಲನೆ ನಡೆಸುತ್ತಿಲ್ಲ ಹಾಗೂ ಮುಂದಿನ ದಿನಗಳಲ್ಲಿ ಇಡೀ ತೆಂಗು ಬೆಳೆ ನಾಶವಾಗುವ ಆತಂಕವಿರುವುದರಿಂದ, ಈ ಸಾಲಿನ ಬಜೆಟ್‌ನಲ್ಲಿ ತಿಪಟೂರಿನಲ್ಲಿ ತೆಂಗು ಸಂಶೋಧನಾ ಕೇಂದ್ರ ಆರಂಭಿಸಿ ತಕ್ಷಣ ಸಂಶೋಧನೆ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಅಬಕಾರಿ ಇಲಾಖೆಗೆ ಮನವಿ ಸಲ್ಲಿಸಿ ಗ್ರಾಮಾಂತರ ಪ್ರದೇಶದಲ್ಲಿ ಆಕ್ರಮ ಮದ್ಯ ಮಾರಾಟ ಹೆಚ್ಚಾಗಿದ್ದು ಯುವಕರು ಮತ್ತು ಹದಿಹರೆಯದ ಮಕ್ಕಳು ಮದ್ಯಪಾ ನಕ್ಕೆ ಬಲಿಯಾಗುತ್ತಿದ್ದಾರೆ. ಹಳ್ಳಿಗಳು ಕುಡು ಕರ ಅಡ್ಡೆಗಳಾಗುತ್ತಿವೆ. ತಕ್ಷಣವೇ ಆಕ್ರಮ

ಮದ್ಯ ಮಾರಾಟವನ್ನು ಸಂಪೂರ್ಣವಾಗಿ ತಡೆದು ಮದ್ಯಪಾನ ಮುಕ್ತ ಹಳ್ಳಿಗಳನ್ನು ನಿರ್ಮಿಸಬೇಕು ಎಂದು ರೈತರು ಆಗ್ರಹಿಸಿದರು.

ಬೆಸ್ಕಾಂಗೆ ಮನವಿ ಸಲ್ಲಿಸಿ ಬೇಸಿಗೆ ಯಲ್ಲಿ ವೋಲ್ಟೇಜ್ ಕೊರತೆಯಿಂದ ರೈತರ ಮೋಟಾರ್‌ಗಳು ಸುಟ್ಟು ಭಾರೀ ನಷ್ಟವಾ ಗುತ್ತಿದೆ. ಅಗತ್ಯವಿರುವ ಕಡೆ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಿ ಸ್ಥಿರ ವಿದ್ಯುತ್ ಸರಬರಾಜು ನೀಡಬೇಕು. ಪರಿವ ರ್ತಕ ಸುಟ್ಟರೆ ಎರಡು ದಿನಗಳೊಳಗೆ ಸರಿಪಡಿಸಿ ಅಳವಡಿಸಬೇಕು. ಸೌರ ವಿದ್ಯುತ್ ಯೋಜನೆಗೆ ಕೇಂದ್ರದ ಜೊತೆಗೆ ರಾಜ್ಯ ಸರ್ಕಾರವೂ ಹೆಚ್ಚಿನ ಅನುದಾನ ನೀಡ ಬೇಕು. ವಿದ್ಯುತ್ ಖಾಸಗೀಕರಣಕ್ಕೆ ರೈತ ಸಂಘ ತೀವ್ರ ವಿರೋಧವಿದೆ ಎಂದು ಆಗ್ರಹಿಸಿದರು.

ಭೂ ದಾಖಲೆಗಳ ಕೊರತೆ ಯಿಂದ ಅನೇಕ ರೈತರು ವರ್ಷಗಳಿಂದ ಸಂಕಷ್ಟ ಅನುಭವಿಸುತ್ತಿದ್ದು, ಕಂದಾಯ ಹಾಗೂ ಅರಣ್ಯ ಇಲಾಖೆ ಜಂಟಿ ಸರ್ವೆ

ನಡೆಸಿ ಮಹಜರು ಮಾಡಿ ದಾಖಲೆ ವಂಚಿತ ರೈತರಿಗೆ ಕಾಲಮಿತಿಯಲ್ಲಿ ಖಾತೆ, ಪಹಣಿ ಸೇರಿದಂತೆ ಎಲ್ಲಾ ದಾಖಲಾತಿಗಳನ್ನು ಮಾಡಿಕೊಡಬೇಕು. ಬಗರ್ ಹುಕ್ಕುಂ ರೈತರಿಗೆ ತಕ್ಷಣವೇ ಹಕ್ಕುಪತ್ರ ನೀಡಿ ದುರಸ್ತಿ ಮಾಡಬೇಕು ಎಂದು ಕಂದಾಯ ಇಲಾಖೆಗೆ ಹಕ್ಕೊತ್ತಾಯಿಸಿದರು.

ಪ್ರಾಂತ ರೈತ ಸಂಘದ ಅಧ್ಯಕ್ಷ ರಂಗಾಪುರ ಚನ್ನಬಸವಣ್ಣ ಮಾತನಾಡಿ, ಬಡ ರೈತರಿಗೆ ಭೂಮಿ ನೀಡಲು ಸರ್ಕಾರ ಗಳು ನಿರ್ಲಕ್ಷ್ಯ ವಹಿಸುತ್ತಿದ್ದು, ದೊಡ್ಡ ಕಂಪನಿಗಳಿಗೆ ಮಾತ್ರ ಸಾವಿರಾರು ಎಕರೆ ಭೂಮಿ ನೀಡಲಾಗುತ್ತಿದೆ ಎಂದು ಆರೋಪಿ ಸಿದರು. ಬಗರ್ ಹುಕ್ಕುಂ ಸಾಗುವಳಿ ಚೀಟಿ ನೀಡಬೇಕು, ಭೂಮಿ ದುರಸ್ತಿ ಹಾಗೂ ಖಾತೆ ಬದಲಾವಣೆ ಪ್ರಕ್ರಿಯೆಯನ್ನು ಸರಳ ಗೊಳಿಸಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ತಾ.ಅಧ್ಯಕ್ಷ ಜಯಾನಂದಯ್ಯ ಮಾತನಾಡಿ ರೈತರ ಬೆಳೆಗಳಿಗೆ ಸೂಕ್ತ ಬೆಲೆ ಖಾತರಿ ನೀಡಬೇಕು. ತುಮಕೂರು ಜಿಲ್ಲೆ ತೆಂಗು ಬೆಳೆಯ

ಪ್ರಮುಖ ಪ್ರದೇಶವಾಗಿರುವುದರಿಂದ ಈ ಸಾಲಿನ ಬಜೆಟ್‌ನಲ್ಲಿ ತಿಪಟೂರಿನಲ್ಲಿ ತೆಂಗು ಸಂಶೋಧನಾ ಕೇಂದ್ರ ಸ್ಥಾಪಿಸಬೇಕು. ತೆಂಗು ಹಾಗೂ ತೆಂಗಿನ ಉತ್ಪನ್ನಗಳ ಮೌಲ್ಯವರ್ಧನೆಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮನವಿ ಸ್ವೀಕರಿಸಿದ ತಹಶೀಲ್ದಾರ್ ಮೋಹನ್ ಕುಮಾರ್ ಮಾತನಾಡಿ ಕಂದಾಯ ಇಲಾಖೆಯಲ್ಲಿ ದಾಖಲೆ ಪ್ರಕ್ರಿಯೆಗಳ ಸರಳೀಕರಣ ನಡೆಯುತ್ತಿದೆ. ಬಗರ್ ಹುಕ್ಕುಂ ಸಾಗುವಳಿ ಸಂಬಂಧಿತ ದುರಸ್ತಿ ಪ್ರಕ್ರಿಯೆ ಯನ್ನು ಸರಳಗೊಳಿಸಲಾಗಿದೆ. ಆದರೆ ಮುಂಜೂರಾತಿ ಪ್ರಕ್ರಿಯೆ ಕಷ್ಟಕರವಾಗಿದೆ ಗೋಮಾಳ ಭೂಮಿಗಳ ಮಂಜೂರಾತಿ ಮಾಡಲು ಸಾಧ್ಯವಿಲ್ಲ. ನಿಯಮಾನು ಸಾರವೇ ಅರ್ಜಿಗಳನ್ನು ವಿಲೇವಾರಿ ಮಾಡ ಲಾಗುತ್ತದೆ. ರೈತರಿಗೆ ಅನಗತ್ಯ ತೊಂದರೆ ಆಗದಂತೆ ಕಂದಾಯ ಇಲಾಖೆ ಕರ್ತವ್ಯ ನಿರ್ವಹಿಸಲಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಹಸಿರು ಸೇನೆಯ ತಿಮ್ಲಾಪುರ ದೇವರಾಜು, ಬಿಳಿಗೆರೆಪಾಳ್ಯ ನಾಗೇಶ್, ಶ್ರೀಕಾಂತ್ ಕೆಳ ಹಟ್ಟಿ, ನಾಗರಾಜು ತಡಸೂರು, ಷಡಕ್ಷರಿ ಗಡಬನಹಳ್ಳಿ, ಸಿದ್ದಯ್ಯ ಬನ್ನಿಹಳ್ಳಿ, ಶಿವ ಶಂಕರಯ್ಯ, ತಿಮ್ಮೇಗೌಡ ಗಡಬನಹಳ್ಳಿ, ರಾಜಮ್ಮ, ಸಿದ್ದಯ್ಯಬಳವನೇರಲು, ಬಸವ ರಾಜು, ಚಂದ್ರಶೇಖರ್, ದೇವಾನಂದ್, ಅಲ್ಲಾಬಕಾಷ್ ಉಪಸ್ಥಿತರಿದ್ದರು."

## ನಮ್ಮ ಕ್ಷೇತ್ರದ ಜನರ ಸಮಸ್ಯೆಗಳಿಗಾಗಿ ಜನಸ್ಪಂದನ :ಆರೋಗ್ಯರಕ್ಷಣೆಗೆ ಆರೋಗ್ಯ ಶಿಬಿರ – ಶಾಸಕ ಸಿ.ಬಿ.ಸುರೇಶ್‌ಬಾಬು

ಚಿಕ್ಕನಾಯಕನಹಳ್ಳಿ:–ನಮ್ಮ ಕ್ಷೇತ್ರದ ಜನತೆಗಾಗಿ ವಿಶೇಷವಾಗಿ 100ನೇ ವಾರದ ಜನಸ್ಪಂದನಾ ಕಾರ್ಯಕ್ರಮದ ಅಚರಣೆಯನ್ನು ಹಾಗೂ ಬೃಹತ್ ಉಚಿತ ಆರೋಗ್ಯತಪಾಸಣೆ ಹಾಗೂ ಚಿಕಿತ್ಸಾ ಶಿಬಿರದೊಂದಿಗೆ ವಿಶೇಷವಾಗಿ ಉಚಿತ ಕಿಡ್ನಿ ತಪಾಸಣಾ ಮತ್ತು ಸಲಹಾ ಶಿಬಿರವನ್ನು ಏರ್ಪಡಿಸಲಾಗಿದ್ದು ನಾಗರೀಕರು ಇದನ್ನು ಸದ್ಬಳಕೆ ಮಾಡಿಕೊಂಡು ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ತಾಲ್ಲೂಕು ಆಡಳಿತ ಸೌಧದ ಶಾಸಕರ ಕೊಠಡಿಯಲ್ಲಿ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿದ ಅವರು ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಮತ್ತು ತಾಲ್ಲೂಕು ಆಡಳಿತ ಇದರೊಂದಿಗೆ ಎಸ್.ಬಿ.ಚಾರಿಟಬಲ್ ಟ್ರಸ್ಟ್, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ, ಆದಿಚುಂಚನಗಿರಿ ಆಸ್ಪತ್ರೆ ಸಹಯೋಗದಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದ ಅವರು ಈ ಬಾರಿಯ ಚುನಾವಣೆಯ ನಂತರದ ಎರಡುವಾರಗಳ ನಂತರ ಶಾಸಕರನ್ನು ಅಧಿಕಾರಿಗಳನ್ನು ಜನರು ಹುಡುಕಿಕೊಂಡು ಅಲೆದಾಡಬಾರದು ಎಂದು ಪ್ರತಿಸೋಮವಾರ ಮಧ್ಯಹ್ನ 4ಗಂಟೆಯಿಂದ ಜನಸ್ಪಂದನಾ ಕಾರ್ಯಕ್ರಮವನ್ನು ರೂಪಿಸಿದ್ದು ಅದು ನೂರುವಾರಗಳನ್ನು ತಲುಪಿದೆ ಈ ಆಚರಣಾ ಸಮಾರಂಭ ಹಾಗೂ ಶಿಕ್ಷಣಕ್ಕೆ ಮತ್ತು ಆರೋಗ್ಯ ಉತ್ತಮ



ಒತ್ತು ನೀಡುತ್ತಿದ್ದು ಈ ನಿಟ್ಟಿನಲ್ಲಿ ಈಗಾಗಲೇ ಉಚಿತ ಸಿಇಟಿ ನೀಟ್ , ಪ್ರೇರಣಾ ಶಿಬಿರಗಳನ್ನು ಮಾಡುವ ಮೂಲಕ ಶಿಕ್ಷಣಕ್ಕೆ ಅದ್ಯತೆ ನೀಡಿದಂತೆ ಉತ್ತಮ ಆರೋಗ್ಯಕ್ಕಾಗಿ ಮುಂದಿನ ವಾರ ಫೆ.16ರ ಸೋಮವಾರದಂದು ಪಟ್ಟಣದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ಇದರೊಂದಿಗೆ ಉಚಿತ ಕಿಡ್ನಿ ತಪಾಸಣಾ ಮತ್ತು ಸಲಹಾ ಶಿಬಿರವನ್ನು ಏರ್ಪಡಿಸಲಾಗಿದ್ದು ನಾಗರೀಕರು ಇದನ್ನು ಸದ್ಬಳಕೆ ಮಾಡಿಕೊಳ್ಳಿ ಎಂದರು. ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆ, ನಿಮಾನ್ಸ್, ಬಿಜಿಎಸ್ ಮೆಡಿಕಲ್ ಕಾಲೇಜು, ಒಕ್ಕಲಿಗ ದಂತ ವೈದ್ಯಕಾಲೇಜು, ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆ, ಮಿಂಟೋ ಕಣ್ಣಿನ ಆಸ್ಪತ್ರೆ, ಮೈಸೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆ, ಮಂಗಳೂರಿನ ಯನಪೋಯ ಆಸ್ಪತ್ರೆಗಳ ಹೃದ್ರೋಗ ತಜ್ಞರು, ಶಸ್ತ್ರ ಚಿಕಿತ್ಸಾ ತಜ್ಞರು, ಕಿವಿ ಮೂಗು, ಗಂಟಲು ತಜ್ಞರು, ನರರೋಗ ತಜ್ಞರು, ಗರ್ಭಿಣಿ ಮತ್ತು ಮಕ್ಕಳ ತಜ್ಞರು, ಮೂತ್ರಪಿಂಡ ತಜ್ಞರು, ಸ್ತ್ರೀ ರೋಗ ತಜ್ಞರು, ಕಣ್ಣಿನ ತಜ್ಞರು, ಕೀಲುಮೂಳೆ , ಚರ್ಮರೋಗ, ಕ್ಯಾನ್ಸ್, ದಂತ, ಮಾನಸಿಕ ತಜ್ಞರು ಭಾಗವಹಿಸಲಿದ್ದು ಉಚಿತವಾಗಿ ಸ್ಕಾ[illegible]ನಿಂಗ್, ಇಸಿಜಿ,ಎಕೋ ಸ್ಕಾನಿಂಗ್, ರಕ್ತ ಮತ್ತು ಮೂತ್ರ ಪರೀಕ್ಷೆ ಹಾಗು ಔಷಧಿಗಳನ್ನು ಉಚಿತವಾಗಿ ನೀಡಲಾಗುವುದು ಅದ್ದರಿಂದ ಈ ಕಾರ್ಯಕ್ರಮವನ್ನು ಸದ್ಬಳಕೆ ಮಾಡಿಕೊಳ್ಳಿ ಎಂದರು.

ವೈದ್ಯ ಡಾ||ನರೇಂದ್ರ ಎಸ್ ಮಾತನಾಡಿ ಈಗಾಗಲೆ 1500ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆ ಮಾಡಿದ್ದು ಇಂತಹ ಬಡವರ ಪಾಲಿಗೆ ನಿಲುಕದ ಈ ಕಿಡ್ನಿ ಸಮಸ್ಯೆಯನ್ನು ನಮ್ಮ ಆದಿಚುಂಚನ ಗಿರಿ ಆಸ್ಪತ್ರೆಯಲ್ಲಿ ಪ್ರಾರಂಭ ಮಾಡಿದ್ದು ಇದುವರೆಗೆ 35ಜನಕ್ಕೆ ಈ ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆಯನ್ನು ಮಾಡಿದ್ದು ಈ ಸಂಬಂಧ ಚಿಕಿತ್ಸಾ ಶಿಬಿರದಲ್ಲೂ ಈ ಕಿಡ್ನಿ ಪರೀಕ್ಷೆಯನ್ನು ಏರ್ಪಡಿಸಲಾಗಿದ್ದು ಜನರು ಬಳಸಿಕೊಳ್ಳುವಂತೆ ತಿಳಿಸಿದರು.

ಕಾರ್ಯಕ್ರಮದ ದಿವ್ಯಸಾನಿದ್ಯವನ್ನು ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥಸ್ವಾಮಿ, ಆರೋಗ್ಯ ತಪಾಸಣಾ ಶಿಬಿರವನ್ನು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ, ವಿವಿಧ ಸೌಲಭ್ಯಗಳನ್ನು ಸಂಸದ ವಿ.ಸೋಮಣ್ಣ ವಿತರಿಸಲಿದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ಉದ್ಘಾಟಿಸಲಿದ್ದಾರೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಸಿ.ಬಿ.ಸುರೇಶ್‌ಬಾಬು ವಹಿಸಲಿದ್ದು ಕಾರ್ಯಕ್ರಮದಲ್ಲಿ 40 ವಿಭಾಗಗಳಲ್ಲಿ ಸು.500ಜನ ವೈದ್ಯರು 500ಜನ ವೈದ್ಯಕೀಯ ಸಿಬ್ಬಂದಿ ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ತಹಸೀಲ್ದಾರ್ ಮಮತಾ ಎಂ, ಡಾ,ಧರ್ಮೇಂದ್ರ, ಸಂದೀಶ್, ತಿಪಟೂರು ಕುಮಾರ್ ಆಸ್ಪತ್ರೆಯ ಡಾ.ಶ್ರೀದರ್ ಸೇರಿದಂತೆ ಇತರರು ಇದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಕಾರ್ಮಿಕ ವಿರೋಧಿ ಸಂಹಿತೆ– ಉದ್ಯೋಗ ಖಾತ್ರಿಯಲ್ಲಿ ಬದಲಾವಣೆ ವಿದ್ಯುತ್ ಖಾಸಗಿಕರಣ ಬೀಜ ಮಸೂದೆ ವಿರುದ್ದ – ಬೃಹತ್ ಮೇರವಣಿಗೆ ಬಿ.ಎಸ್.ಎನ್.ಎಲ್ ಕಛೇರಿ ಮುತ್ತಿಗೆ ಯತ್ನ

ಕಾರ್ಮಿಕ ವಿರೋಧಿ 4 ಸಂಹಿತೆಗಳನ್ನು ಜಾರಿ ವಿರೋಧಿಸಿ, ಗ್ರಾಮಿಣ ಉದ್ಯೋಗ ಖಾತ್ರಿ ಯೋಜನೆ ಪುನರ್ ಸ್ಥಾಪಿಸಿ, ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಸೇವೆಗಳನ್ನು ಖಾಯಂ ಮಾಡಿ, 12 ಗಂಟೆಯ ದುಡಿಮೆ ಕಾನೂನು ಹಿಂಪಡೆಯಿರಿ, ಕನಿಷ್ಟ ವೇತನ ಮಾಸಿಕ 41ಸಾವಿರ ನಿಗಧಿ ಮಾಡಿ,ನಿಗಧಿತ ಕಾಲಾವಧಿ ದುಡಿಮೆ ಅವಕಾಶ ನೀಡಿ, ಖಾಯಂ ಕೆಲಸಗಳೆ ಇಲ್ಲದಂತೆ ಮಾಡುವುದನ್ನು ವಿರೋಧಿಸಿ. ವಿದ್ಯುತ್ ಬಳಕೆದಾರರಿಗೆ ವಿಪರೀತ ಬೆಲೆ ಏರಿಕೆಗೆ ಕಾರಣವಾಗುವ ವಿದ್ಯುತ್ ಖಾಸಗಿಕರಣಕ್ಕೆ ದಾರಿ ಮಾಡುವ ವಿದ್ಯುತ್ ಕಾಯಿದೆ ವಿರೋಧಿಸಿ. ರೈತರ ಸ್ವಾವಲಂಬನೆಗೆ ಕುತ್ತು ತರುವ ಬೀಜ ಮಸೂದೆ ವಿರೋಧಿಸಿ , ಬಲವಂತದ ಭೂಸ್ವಾಧಿನ, ಬಗೇರ್ ಹುಕುಂ ಸಾಗುವಳಿದಾರರ ಪ್ರಶ್ನೆ ಇತ್ಯಾರ್ಥಕ್ಕೆ ಅಗ್ರಹಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಮತ್ತು ಸಂಯುಕ್ತ ಹೋರಾಟ ಕರ್ನಾಟಕ ಜಂಟಿಯಾಗಿ ಕರೆ ನೀಡಿದ್ದ ಫೆ12 ,ರ ಅಖಿಲ ಭಾರತ ಸರ್ವಾತ್ರಿಕ ಮುಷ್ಕರದ ಭಾಗವಾಗಿ ತುಮಕೂರು ನಗರದಲ್ಲಿ ಸಾವಿರಾರು ರೈತ– ಕಾರ್ಮಿಕರು ಟೌನ್‌ಹಾಲ್ ಮುಂಭಾಗ ಸಮಾವೇಶಗೊಂಡು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ಬಿ.ಎಸ್. ಎನ್. ಎಲ್ ಕಛೇರಿ ಎದುರು ಮುತ್ತಿಗೆ ಹಾಕಿದರು. ಅಂತರಸನ ಹಳ್ಳಿ, ಸತ್ಯಮಂಗಲ, ವಸಂತನರಸಾಪುರ, ಹಿರೇಹಳ್ಳಿ ಕೈಗಾರಿಕಾ ಪ್ರದೇಶದಿಂದ ಕೆಲಸಕ್ಕೆ ಹಾಜರಾಗದ ಸಾವಿರಾರು ಕಾರ್ಮಿಕರು ಮುಷ್ಕರದಲ್ಲಿ ಬಾಗಿಯಾದರು. ಅಂಗನವಾಡಿ, ಬಿಸಿಯೂಟ. ಅಶಾ,



ಮುನಿಸಿಪಲ್ , ಅಸ್ಪತ್ರೆ, ಹಮಾಲಿ ಕಾರ್ಮಿಕರು. ಫುಟ್‌ಪಾತ್ ವ್ಯಾಪಾರಿಗಳು. ಬ್ಯಾಂಕ್ ನೌಕರರು. ವಿಮಾ ನೌಕರರು. ಮುಷ್ಕರದಲ್ಲಿ ಭಾಗಿಯಾಗಿದ್ದರು.

ರೈತ ಸಂಘದ ಜಿಲ್ಲಾಧ್ಯಕ್ಷರಾದ ಎ. ಗೋವಿಂದ ರಾಜು ಅವರು ಮೆರವಣಿಗೆಗೆ ಚಾಲನೆ ನೀಡಿದರು. ಪ್ರಸ್ತಾವಿಕವಾಗಿ ಜೆಸಿಟಿಯು ಜಿ ಲ್ಲಾ ಸಂಚಾಲಕರಾದ ಕಂಬೆಗೌಡ ಅವರು ಮಾತನಾಡಿ ಈ ಐತಿಹಾಸಿಕ ಮುಷ್ಕರಕ್ಕೆ ಎಲ್ಲಾರು ಕೈಜೋಡಿಸಲು ಮನವಿ ಮಾಡಿದರು. ಮಂಡಿಪೇಟೆ ಸರ್ಕಲ್ ನಲ್ಲಿ ಪ್ರತಿಭಟನಾ ಮೇರವಣಿಗೆಯನ್ನು ಕುರಿತು ಮಾತನಾಡಿದ ಎಐಯುಟಿಯುಸಿ ಜಿಲ್ಲಾ ಸಂಚಾಲಕರಾದ ಮಂಜುಳ ಗೋನಾವರ ಅವರು ಸರ್ಕಾರಗಳು ನಿರಂತರವಾಗಿ ಜ ನವಿರೋಧಿಯಾಗಿ ವರ್ತಿಸುತ್ತಿವೆ , ಹೋರಾಟವೆ ಜನರಿಗೆ ಇ ರುವ ದಾರಿ ವರ್ತಕರಾದಿಯಾಗಿಎಲ್ಲಾರು ಕೈಜೋಡಿಸಬೇಕೆಂದರು.

ಉರಿಯುವ ಬಿಸಿಲಿನಲ್ಲೂ ಬಿ.ಎಸ್. ಎನ್. ಎಲ್ ಮುಂದೆ ಧರಣಿಕಾರರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ಮಾತನಾಡಿ ಜನತೆ– ರೈತ ಕಾರ್ಮಿಕರಿಗೆ ಮಾರಕವಾದ ಸರ್ಕಾರದ ನಿ ೀತಿಗಳು ಬಂಡವಾಳಗಾರ– ಕಾರ್ಪೋರೇಟ್ ಕಂಪನಿಗಳ ಲಾಭದ ಗ್ಯಾರೆಂಟಿಯನ್ನು ಮಾತ್ರ ನೋಡುತ್ತಿವೆ , ಕಾರ್ಮಿಕ– ರೈತರು–ಜನತೆ ನೀತಿ ಅಧಾರಿತವಾಗಿ ಮತ ನೀಡಲು, ಅಸಮಾನತೆ ಹೆಚ್ಚಿಸುವ ನೀತಿಗಳನ್ನು ಸೋಲಿಸಲು ಕರೆ ನೀಡಿದರು.

ಎಐಟಿಯುಸಿ ಜಿಲ್ಲಾ ಕಾರ್ಯಧ್ಯಕ್ಷರಾದ ಗಿರಿಶ್ ಮಾತನಾಡಿ ಸ್ವದೇಶಿ ಎಂದು ಹೇಳಿ ಅಧಿಕಾರ ಹಿಡಿದ ಬಿಜೆಪಿ ಅಮೇರಿಕಾ ದೇಶಕ್ಕೆ ಭಾರತವನ್ನು ಒತ್ತೆಇಟ್ಟಿದೆ. ನಾವು ಎಲ್ಲಿ ಪೆಟ್ರೋಲ್ ಖರಿದಿಸಬೇಕು. ಎಂಬು ಅವರೆ ಹೇಳುತ್ತಾರೆ. ಭಾರತವನ್ನು'ಮತ್ತೆ ಅವರ ಗುಲಾಮಗಿರಿಗೆ ಬಿಜೆಪಿ ತಂದು ನಿಲ್ಲಿಸಿದೆ ಎಂದರು

ಐಎನ್ಟಿಯುಸಿ ಗೊವಿಂದರಾಜು 4 ಸಂಹಿತೆಗಳನ್ನು ರಾಜ್ಯದಲ್ಲಿ ಜಾರಿ ಮಾಡಬಾರದು ಎಂದರು. ರಂಗನಾಥ್ ಮಾತನಾಡಿ ಉದ್ಯೋಗ ಖಾತರಿ ಯೊಜನೆಯನ್ನು ನಾಶಮಾಡಲು ಬಿಡಬಾರದು ಎಂದರು.

# ವಿದ್ಯಾರ್ಥಿಗಳಲ್ಲಿ ವ್ಯಾಪಾರ ಮನೋಭಾವನೆ, ವ್ಯವಹಾರಿಕ ಜೀವನ ನಿರ್ವಹಣೆ ತಿಳಿಸುವ ಉದ್ದೇಶದಿಂದ ಸಂತೆ ಮೇಳ

ಕೊರಟಗೆರೆ:–ವಿದ್ಯಾರ್ಥಿಗಳಲ್ಲಿ ವ್ಯಾಪಾರ ಮನೋಭಾವನೆ, ವ್ಯವಹಾರಿಕ ಜೀವನ ನಿರ್ವಹಣೆ ಮಹತ್ವ ತಿಳಿಸುವ ಉದ್ದೇಶದಿಂದ ಹೊಳವನಹಳ್ಳಿ ಹಿಂದೂಸ್ತಾನ್ ಇಂಟರ್ ನ್ಯಾಷನಲ್ ಶಾಲಾ ಆವರಣದಲ್ಲಿ ಎಲ್ ಕೆ ಜಿ, ಯಿಂದ 8 ನೇ ತರಗತಿ ವರೆಗಿನ ಮಕ್ಕಳಿಂದ ಮಕ್ಕಳ ಸಂತೆ ಏರ್ಪಡಿಸಲಾಗಿತ್ತು.

ಓದು ಆಟ–ಪಾಠಕ್ಕೆ ಮೀಸಲಾಗಿದ್ದ ಶಾಲಾ ಆವರಣ ಸಂತೆಯ ರೀತಿ ಮಾರ್ಪಾಡಾಗಿತ್ತು. ವಿದ್ಯಾರ್ಥಿಗಳು ತಮ್ಮ ಮನೆಗಳಿಂದ ತಂದಂತಹ ವಿವಿಧ ಬಗೆ ಬಗೆಯ ತಾಜಾ ತರಕಾರಿ, ಹೂವು, ಸೊಪ್ಪು, ಹಣ್ಣು–ಹಂಪಲು ಹಾಗೂ ತಿಂಡಿ ತಿನ್ನಿಸುಗಳು, ತಂಪು ಪಾನೀಯಗಳು ಸಂತೆಯಲ್ಲಿದ್ದವು. ಮೊದಲೇ ಹಳ್ಳಿ ಮಕ್ಕಳಾದ್ದರಿಂದ ಪೈಪೋಟಿಗೆ ಬಿದ್ದವರಂತೆ ಭರ್ಜರಿ ವ್ಯಾಪಾರ ಮಾಡಿ ಓದಕ್ಕೂ ಸೈ, ವ್ಯಾಪಾರಕ್ಕೂ ಜೈ ಎನಿಸಿಕೊಂಡರು.

ಶಾಲಾ ಮಕ್ಕಳ ವ್ಯಾಪಾರಕ್ಕೆ ಹಿರಿಯ ವಿದ್ಯಾರ್ಥಿಗಳು ಸಹಕಾರ ನೀಡಿದರು. ವ್ಯಾಪಾರ ಮಾಡುವ ಕೌಶಲ್ಯ ಹೇಳಿಕೊಟ್ಟರು, ಚಿಲ್ಲರೆ ಕೊಡುವ ಲೆಕ್ಕಚಾರ ಕಲಿಸಿದರು. ಒಟ್ಟಿನಲ್ಲಿ ಶಾಲೆಯ ಎಲ್ಲ ಮಕ್ಕಳಿಗೂ ಸಂತೆ ಮೇಳ ಹೊಸ ಕಲೆ ಕಲಿಸಿದಂತಿತ್ತು. ಈ ಮೇಳದಲ್ಲಿ ಶಿಕ್ಷಕರು, ಪೋಷಕರೇ ಗ್ರಾಹಕರಾಗಿ ತಮಗಿಷ್ಟವಾದ ವಸ್ತುಗಳನ್ನು ಖರೀದಿಸಿದರು. ವಿದ್ಯಾರ್ಥಿಗಳು ಬಹಳ ಉತ್ಸಾಹದಿಂದ ವಿವಿಧ ರೀತಿಯ ತಿಂಡಿ ತಿನಿಸು, ತರಕಾರಿಗಳು ಹಾಗೂ ಇತರ



ಪದಾರ್ಥಗಳನ್ನು ಮಾರಾಟ ಮಾಡಿದರು.

ಮಕ್ಕಳಿಗೆ ಪಠ್ಯ ಚಟುವಟಿಕೆಗಳ ಜತೆಗೆ ಸಹಪಠ್ಯ ಚಟುವಟಿಕೆಗಳನ್ನು ನಡೆಸುವುದರಿಂದ ಅವರ ಬೌದ್ಧಿಕ ಜ್ಞಾನ ವಿಕಾಸ ಮತ್ತು ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಮಕ್ಕಳಲ್ಲಿ ಲೆಕ್ಕಾಚಾರ ಪ್ರವೃತ್ತಿ ಹಾಗೂ ಗ್ರಾಹಕರೊಂದಿಗೆ ವರ್ತಿಸುವ ಕೌಶಲ್ಯವನ್ನು ಬೆಳೆಸಲು ಮಕ್ಕಳ ಸಂತೆ ಆಯೋಜಿಸಲಾಗಿತ್ತು. ಪೋಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಮಕ್ಕಳೂ ಸಹ ಲವಲವಿಕೆಯಿಂದ ಪಾಲ್ಗೊಂಡು ಶಾಲೆಯಲ್ಲಿ ಸಂಭ್ರಮದ ವಾತಾವರಣ ಸೃಷ್ಟಿಸಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಫೈರೋಜ್ ಬೇಗಂ ಹಿಂದೂಸ್ತಾನ್ ಶಾಲೆಗೆ ಭೇಟಿ ನೀಡಿ ಸಂತೆ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಕ್ಕಳಿಂದ ತಿಂಡಿ ತಿನಿಸುಗಳನ್ನು ಖರೀದಿಸಿ ಸಂತೆ ಮೇಳಕ್ಕೆ ಮಕ್ಕಳ ತೋರುಸುತ್ತಿದ್ದ ಆಸಕ್ತಿ ಆಲಿಸಿದರು. ಶಿಕ್ಷಣ ಇಲಾಖೆ ಪ್ರತಿಭಾ ಕಾರಂಜಿ ಹಾಗೂ ವಿಜ್ಞಾನ ವಸ್ತು ಪ್ರದರ್ಶನ ನಡೆಸಿ ಮಕ್ಕಳ ಪ್ರತಿಭೆಗೆ ವೇದಿಕೆ ಸೃಷ್ಟಿಸಿದೆ. ಈ ಜೊತೆಗೆ ಮಕ್ಕಳಲ್ಲಿ ವ್ಯವಹಾರ ಜ್ಞಾನ ಬೆಳೆಸಲು ಸಂತೆ ಮೇಳ ನಡೆಸುತ್ತಿದ್ದು ಮಕ್ಕಳಿಗೆ ಶಾಲೆಯ ಹೊರತಾದ ಪ್ರಪಂಚ ಪರಿಚಯ ಮಾಡಲಾಗುತ್ತಿದೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದರು.

ಈ ಸಂದರ್ಭದಲ್ಲಿ ಶಾಲಾ ಮುಖ್ಯಸ್ಥರಾದ ಯಾಸ್ಮಿನ್ ಸುಲ್ತಾನ ಮಾತನಾಡಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಆರ್ಥಿಕ ವ್ಯವಹಾರ ನಡೆಸುವುದು ಹೇಗೆ ಎಂಬ ಬಗ್ಗೆ ಈ ಸಂತೆ ಮೇಳದಿಂದ ಅರಿವು ಮೂಡುತ್ತದೆ. ಇದರಿಂದ ಮಕ್ಕಳಿಗೆ ಸಾಕಷ್ಟು ದೊಡ್ಡ ಮಟ್ಟದಲ್ಲಿ ಉಪಯೋಗ ಆಗಲಿದೆ ಎಂದು ಹೇಳಿದರು.

ಸಂತೆ ಮೇಳ ಕಾರ್ಯಕ್ರದಲ್ಲಿ ಮಕ್ಕಳು ತಂದಿದ್ದಂತಹ ಆಹಾರ ಪದಾರ್ಥಗಳು, ತಿಂಡಿ, ನೀರು, ಜ್ಯೂಸ್ ಸೇರಿದಂತೆ ಇನ್ನಿತರ ಪದಾರ್ಥಗಳನ್ನು ಪೋಷಕರು ಖರೀದಿ ಮಾಡಿ ಸಂತೆ ಮೇಳ ಕಾರ್ಯಕ್ರಮ ಯಶಸ್ವಿಗೊಳಿಸಿದರು.

# 'ಸರ್ಕಾರಿ ಶಾಲೆಯ ಶ್ರೇಷ್ಠತೆ ತಿಳಿದು ಶಾಲೆ ಬೆಳೆಸಿ' :ಶಾಲಾ ಕೊಠಡಿಗಳಿಗೆ ಸುರೇಶ್‌ಗೌಡ ಶಂಕುಸ್ಥಾಪನೆ

ತುಮಕೂರು: ಸರ್ಕಾರಿ ಶಾಲೆಯಲ್ಲಿ ವಿದ್ಯೆ ಕಲಿತ ಅನೇಕ ಮಹನೀಯರು ದೊಡ್ಡ ಸಾಧನೆ ಮಾಡಿದ್ದಾರೆ. ಉನ್ನತ ಹುದ್ದೆ ಪಡೆದಿದ್ದಾರೆ. ಸರ್ಕಾರಿ ಶಾಲೆಯ ಶ್ರೇಷ್ಠತೆ ಅರ್ಥ ಮಾಡಿಕೊಂಡು ಶಾಲೆಯನ್ನು ಉಳಿಸಿಬೆಳೆಸಬೇಕು ಎಂದು ಶಾಸಕ ಬಿ.ಸುರೇಶ್‌ಗೌಡರು ಮನವಿ ಮಾಡಿದರು.

ತುಮಕೂರು ಗ್ರಾಮಾಂತರ ಕ್ಷೇತ್ರದ ಹೊನಸಿಗೆರೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಅಲ್ಯೂಮಿನಿಯಂ ಜಿಂದಾಲ್ ಕಂಪನಿಯ ಸಿಎಸ್‌ಆರ್ ನಿಧಿಯಡಿ 50 ಲಕ್ಷ ರೂ. ವೆಚ್ಚದಲ್ಲಿ ನಾಲ್ಕು ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಗುರುವಾರ ಶಂಕುಸ್ಥಾಪನೆ ನೆರವೇರಿಸಿದ ಶಾಸಕರು, ನಂತರ ನಡೆದ ಸಮಾರಂಭದಲ್ಲಿ ಮಾತನಾಡಿ, ಹೊನಸಿಗೆರೆ ಗ್ರಾಮದಲ್ಲಿ ಹುಟ್ಟಿದ ಲೋಕಸಭೆ ಮಾಜಿ ಉಪಸಭಾಪತಿ ದಿ.ಎಸ್. ಮಲ್ಲಿಕಾರ್ಜುನಯ್ಯನವರು ಇದೇ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದು ಲೋಕಸಭೆ ಡೆಪ್ಯೂಟಿ ಸ್ಪೀಕರ್‌ನಂತಹ ದೇಶದ ಉನ್ನತ ಸ್ಥಾನಕ್ಕೆ ಏರಿದರು. ಇಲ್ಲಿ ಕಲಿತ ಅನೇಕರು ಡಾಕ್ಟರ್, ಎಂಜಿನಿಯರ್ ಸೇರಿದಂತೆ ಉನ್ನತ ಸ್ಥಾನಮಾನ ಗಳಿಸಿದ್ದಾರೆ, ವಿದ್ಯಾರ್ಥಿಗಳ ಭವಿಷ್ಯವನ್ನು ಸುಭದ್ರಗೊಳಿಸುವ ಶಕ್ತಿ ಸರ್ಕಾರಿ ಶಾಲೆಗಳಿಗಿದೆ ಎಂದರು.ಸರ್ಕಾರಿ ಶಾಲೆಗಳ ಬಗ್ಗೆ ಯಾರೂ ತಿರಸ್ಕಾರ ಭಾವದಿಂದ ಕಾಣಬಾರದು. ಇಲ್ಲಿ ಉತ್ತಮ ಶಿಕ್ಷಕರು, ಕಟ್ಟಡ, ಅಗತ್ಯ ಸೌಕರ್ಯ ಜೊತೆಗೆ



ಸರ್ಕಾರದಿಂದ ಅನೇಕ ಸೌಲಭ್ಯಗಳು ದೊರೆಯುತ್ತವೆ. ಗುಣಮಟ್ಟದ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿದೆ ಎಂಬುದನ್ನು ಮಕ್ಕಳ ಪೋಷಕರು ಮನವರಿಕೆ ಮಾಡಿಕೊಳ್ಳಬೇಕು. ಈ ಶಾಲೆಗೆ ಹೆಚ್ಚುವರಿಯಾಗಿ ನಾಲ್ಕು ಕೊಠಡಿಗಳನ್ನು ನಿರ್ಮಾಣ ಮಾಡಲಾಗುವುದು. ಮುಂದೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಹೇಳಿದರು. ಹೊನಸಿಗೆರೆ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘವನ್ನು ಅಸ್ತಿತ್ವಕ್ಕೆ ತನ್ನಿ, ಸಂಘದ ಮೂಲಕ ಈ ಶಾಲೆಯ ಶ್ರೇಯೋಭಿವೃದ್ಧಿಗೆ ಕಾಳಜಿವಹಿಸಿ ಎಂದು ಶಾಸಕ ಸುರೇಶ್‌ಗೌಡರು ಹಳೆ ವಿದ್ಯಾರ್ಥಿಗಳಿಗೆ ಮನವಿ ಮಾಡಿದರು. ಜಿಂದಾಲ್ ಕಂಪನಿಯವರು ಈ ಶಾಲೆಯ ಕೊಠಡಿಗಳ ನಿರ್ಮಾಣಕ್ಕಾಗಿ ತಮ್ಮ ಸಿಎಸ್‌ಆರ್ ಅನುದಾನ ನೀಡಿದ್ದಾರೆ. ಇವರು ಮತ್ತಷ್ಟು ಇಂತಹ ಸೇವಾ ಕಾರ್ಯ ಮಾಡುವಂತಾಗಲಿ, ಕಂಪನಿಯಲ್ಲಿ ಹೆಚ್ಚು ಜನರಿಗೆ ಉದ್ಯೋಗ ನೀಡುವ ಶಕ್ತಿ ದೊರೆಯಲಿ ಎಂದು ಹಾರೈಸಿದರು.

ಜಿಂದಾಲ್ ಕಂಪನಿಯ ಮುಖ್ಯಸ್ಥರಾದ ಸುಖದೇವ್ ಎಸ್.ಜರಸಲೇ, ಹರ್ಷದೀಪ್ ಸಿಂಗ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತರಾಯಪ್ಪ, ಲೋಕಸಭೆ ಮಾಜಿ ಉಪಸಭಾಪತಿ ಎಸ್. ಮಲ್ಲಿಕಾರ್ಜುನಯ್ಯ ಅವರ ಪುತ್ರಿ ನಾಗವೇಣಿ(ಬೇಬಿ), ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷೆ ನೇತ್ರಾವತಿ, ಮುಖಂಡರಾದ ಸಿದ್ದೇಗೌಡ, ಆಂಜನಪ್ಪ, ಗುರಣ್ಣ, ಶಿವಶಂಕರ್, ಉಮೇಶ್, ದಯಾನಂದ್, ಮಲ್ಲೇಶ್, ಶ್ರೀನಿವಾಸ್, ವೆಂಕಟೇಶ್, ಸಿದ್ಧಲಿಂಗಪ್ಪ, ಎಸ್‌ಡಿಎಂಸಿ ಸದಸ್ಯರು, ಶಾಲೆ ಶಿಕ್ಷಕರು ಭಾಗವಹಿಸಿದ್ದರು.

# ಇಂಧನ ಇಲಾಖೆಯನ್ನು ಖಾಸಗಿಕರಣಗೊಳಿಸಲು 2026ರ ವಿದ್ಯುತ್ ಬಿಲ್ಲನ್ನು ಮಂಡಿಸುತ್ತಿರುವ ವಿರುದ್ಧ ಪ್ರತಿಭಟನೆ

ಕುಣಿಗಲ್ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ 659 ಹಾಗೂ ನೌಕರರ ಒಕ್ಕೂಟ ಕೇಂದ್ರ ಸರ್ಕಾರ ಅಧಿವೇಶನದಲ್ಲಿ ಇಂಧನ ಇಲಾಖೆಯನ್ನು ಖಾಸಗಿಕರಣಗೊಳಿಸಲು 2026ರ ವಿದ್ಯುತ್ ಬಿಲ್ಲನ್ನು ಮಂಡಿಸುತ್ತಿರುವ ವಿರುದ್ಧ ತಾಲೂಕು ಬೆಸ್ಕಾಂ ವಿಭಾಗ ಕಚೇರಿ ಮುಂದೆ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದರು . ಬೆಸ್ಕಾಂ ವಿಭಾಗ ಕಚೇರಿಯ ಲೆಕ್ಕಾಧಿಕಾರಿಗಳಾದ ಶಿವಕುಮಾರ್ ಮಾತನಾಡುತ್ತ ಖಾಸಗಿ ಬಂಡವಾಳ ಶಾಹಿಗಳಿಗೆ ಅನುಕೂಲ ವಾಗಲು ವಿದ್ಯುತ್ ವಿತರಣಾ ಹಾಗೂ ಸರಬರಾಜು ವಲಯಗಳ ಕಂಬಗಳ ತಂತಿಗಳನ್ನು ಬಳಸಿಕೊಂಡು ಖಾಸಗಿ ಉತ್ಪಾದಕರು ನೇರವಾಗಿ ವಿದ್ಯುತ್ತನ್ನು ಗ್ರಾಹಕರಿಗೆ ನೀಡುತ್ತಾರೆ, ರೈತರು ಮತ್ತು ಬಡವರು ಬಿಲ್ ಗಳನ್ನು ಕಟ್ಟಿ ಆಮೇಲೆ ಸಬ್ಸಿಡಿಯನ್ನು ಪಡೆಯಬೇಕಾಗುತ್ತದೆ, ಖಾಸಗಿ ಕಂಪನಿಗಳು ದರ ಏರಿಕೆ ಮಾಡುವಂತ ವ್ಯವಸ್ಥೆ ತರುತ್ತಾರೆ, ಖಾಸಗಿ ಕಂಪನಿಗಳು ಇಷ್ಟಪಟ್ಟರೆ ನಮ್ಮನ್ನು ಕೆಲಸದಲ್ಲಿ ಮುಂದುವರಿಸಬಹುದು ಇಲ್ಲವಾದರೆ ವಾಪಸ್ ಕಳಿಸುತ್ತಾರೆ, ಕಂಟ್ರಾಕ್ಟರ್ ಮೂಲಕ ಕೆಲಸಗಳನ್ನು ಮಾಡಿಸುತ್ತಾರೆ ಗ್ರಾಹಕರಿಗೂ ಹಾಗೂ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿ ಮಾಡುತ್ತಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎ ಇ ಇ ವೀರಭದ್ರಚಾರ್, ವೆಂಕಟೇಶ್, ಕಿಶೋರ್, ಜಯಕುಮಾರ್, ನೌಕರರ ಸಂಘದ ಅಧ್ಯಕ್ಷರಾದ ಸುರೇಶ್, ಕಾರ್ಯದರ್ಶಿ ಎಎನ್ ಗಿರೀಶ್, ಕೇಂದ್ರ ಸಮಿತಿ ಸದಸ್ಯ ವಿ ಮಹೇಶ್, ಪರಶುರಾಮ್ ಸದಸ್ಯರಾದ ರಮೇಶ್, ಡಿ.ನಟರಾಜು, ಚಿಕ್ಕಣ್ಣ, ಅನಿತಾ, ಶೋಭಾ ಸೇರಿದಂತೆ ಅಧಿಕಾರಿಗಳು ನೌಕರರು




ಶಾಂತಿಯುತ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪಾವನ ಆಸ್ಪತ್ರೆಯಲ್ಲಿ ಉಚಿತ ಕಾನೂನು ನೆರವು ಕಾರ್ಯಕ್ರಮ

ತುಮಕೂರು :ನಗರದ ಕೋತಿ ತೋಪು ರಸ್ತೆಯಲ್ಲಿರುವ ಪಾವನ ಆಸ್ಪತ್ರೆಯಲ್ಲಿ ಬುಧವಾರದಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ತುಮಕೂರು ವತಿಯಿಂದ ಉಚಿತ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಪ್ಯಾರಾ ಲೀಗಲ್ ವಾಲೆಂಟಿಯರ್ ಕೆ ಎಂ ರಾಮಕೃಷ್ಣಯ್ಯ ರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಪತಿ–ಪತ್ನಿ ಗಲಾಟೆ, ಜಮೀನು ವ್ಯಾಜ್ಯ, ಅಪಘಾತ, ಇನ್ನು ಅನೇಕ ಸಮಸ್ಯೆಗಳಿಗೆ ಕಾನೂನು ಸೇವೆ ಪ್ರಾಧಿಕಾರ ಉಚಿತ ಕಾನೂನು ನೆರವನ್ನು ನೀಡುತ್ತಿದೆ ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಆಸ್ಪತ್ರೆಯಲ್ಲಿರುವ ಸಿಬ್ಬಂದಿಗಳಿಗೆ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಪಾವನ ಆಸ್ಪತ್ರೆಯ ಮುಖ್ಯಸ್ಥರಾದ ಡಾ. ಡಿ ಮುರುಳೀಧರ್ ಸೇರಿದಂತೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಹೈಟೆಕ್ ಶಿಥಲೀಕರಣ ಕೇಂದ್ರ



ಮಧುಗಿರಿ:ಮಧುಗಿರಿ ಪಟ್ಟಣದ ಹೊರವಲಯದಲ್ಲಿರುವ ತುಮಕೂರು ಹಾಲು ಒಕ್ಕೂಟದ ಹಾಲು ಶಿಥಲೀಕರಣ ಕೇಂದ್ರವನ್ನು ಹೈಟೆಕ್ ಶಿಥಲೀಕರಣ ಕೇಂದ್ರ ಮಾಡಲು ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಬಿ ನಾಗೇಶ್ ಬಾಬುರವರು ಮಾಜಿ ಸಚಿವರು ಹಾಗೂ ಶಾಸಕರಾದ ಕೆ ಎನ್ ರಾಜಣ್ಣ ರವರಿಗೆ ಮನವಿ ಪತ್ರ ಅರ್ಪಿಸಿದರು ಈ ಸಂದರ್ಭದಲ್ಲಿ ಮಾತನಾಡಿದ ಅವರು ಹೈಟೆಕ್ ಹಾಲು ಶೀಥಲೀಕರಣ ಕೇಂದ್ರ ನಿರ್ಮಾಣದಿಂದ ನಾಲ್ಕು ತಾಲೂಕಿನ ಹಾಲು ಉತ್ಪಾದಕರಿಗೆ ಅನುಕೂಲವಾಗಲಿದೆ ಇದೆ ಅಲ್ಲದೆ 70,000 ದಿಂದ 2, ಲಕ್ಷ ಲೀಟರ್ ಹಾಲು ಶೇಖರಿಸಬಹುದು ಮತ್ತು ಹಾಲು ಶಿಥಲಿಕರಣ ಮಾಡಬಹುದು ಎಂದು ತಿಳಿಸಿದರು ಇದಕ್ಕೆ ಸ್ಪಂದಿಸಿದ ಶಾಸಕ ಕೆ ಎನ್ ರಾಜಣ್ಣ 32 ಕೋಟಿರುವ ವೆಚ್ಚದ ಹೈಟೆಕ್ ಶಿಥಲಿಕರಣ ಕೇಂದ್ರ ನಿರ್ಮಾಣ ಮಾಡಲು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡಿಸುವುದಾಗಿ ಭರವಸೆ ನೀಡಿದ ಅವರು ಗುಣಮಟ್ಟದ ಹಾಲು ಶೇಖರಣೆಗೆ ಹೆಚ್ಚು ಹೊತ್ತು ನಿಡುವಂತೆ ಸೂಚಿಸಿದ ಅವರು ಹಾಲು ಉತ್ಪಾದಕರ ಸಂಘಗಳಲ್ಲಿ ರಾಜಕೀಯ ಬರಬಾರದು ಹಾಲು ಉತ್ಪಾದಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಹೊತ್ತು ನೀಡಬೇಕು ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಅದಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತುಮಕೂರು ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸನ್, ಮಾಜಿ ಅಧ್ಯಕ್ಷ ಮಹಾಲಿಂಗಯ್ಯ, ತಾಲೂಕು ಮುಖ್ಯಸ್ಥ ರಂಜಿತ.

# ಫೆ.16ರಂದು 100ನೇ ವಾರದ ಜನಸ್ಪಂದನ ಸಮಾರಂಭ

ತುಮಕೂರು: ಜಿಲ್ಲಾಡಳಿತ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕು ಆಡಳಿತದ ವತಿಯಿಂದ ಫೆಬ್ರವರಿ 16ರಂದು ಬೆಳಿಗ್ಗೆ 8.30 ಗಂಟೆಗೆ ಚಿಕ್ಕನಾಯಕನಹಳ್ಳಿ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ ಜನಸ್ಪಂದನದ ಯಶಸ್ವಿ 100ನೇ ವಾರದ ಆಚರಣಾ ಸಮಾರಂಭ, ಸರ್ಕಾರಿ ವಿವಿಧ ಸವಲತ್ತುಗಳ ವಿತರಣೆ ಹಾಗೂ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.

ಆದಿಚುಂಚನಗಿರಿ ಮಠದ ಜಗದ್ಗುರು ಡಾ: ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದು, ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕಾ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸುವರು.

ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಸರ್ಕಾರಿ ವಿವಿಧ ಸವಲತ್ತುಗಳ ವಿತರಣೆ ಮಾಡುವರು. ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಕಾರ್ಯಕ್ರಮವನ್ನು ಉದ್ಘಾಟಿಸುವರು. ಚಿಕ್ಕನಾಯಕನಹಳ್ಳಿ ಶಾಸಕ ಸುರೇಶ್ ಬಾಬು ಸಿ.ಬಿ. ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಡಿ.ಸಿ. ಕಚೇರಿಯಲ್ಲಿ ತಾತ್ಕಾಲಿಕ ಖಾದಿ ಮಳಿಗೆ

ತುಮಕೂರು: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಸಂಸ್ಥೆಗಳು/ ನಿಗಮ ಮಂಡಳಿ/ ಸ್ವಯತ್ತ ಸಂಸ್ಥೆ/ ವಿಶ್ವವಿದ್ಯಾನಿಲಯಗಳ ಅಧಿಕಾರಿ/ನೌಕರರು ಸ್ವಯಂ ಪ್ರೇರಣೆಯಿಂದ ಪ್ರತಿ ತಿಂಗಳ ಮೊದಲ ಶನಿವಾರದಂದು ಖಾದಿ ಉಡುಪನ್ನು ಧರಿಸುವಂತೆ ಸರ್ಕಾರ ಆದೇಶಿಸಿರುವ ಹಿನ್ನೆಲೆಯಲ್ಲಿ ಫೆಬ್ರವರಿ 13ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ತಾತ್ಕಾಲಿಕ ಖಾದಿ ಮಳಿಗೆಯನ್ನು ತೆರೆಯಲಾಗುತ್ತಿದೆ ಎಂದು ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಟಿ.ಎಸ್. ಚಂದ್ರಶೇಖರಯ್ಯ ತಿಳಿಸಿದ್ದಾರೆ.

ಸದರಿ ಮಳಿಗೆಯಲ್ಲಿ ಖಾದಿ ಬಟ್ಟೆ ಮತ್ತು ಖಾದಿ ಸಿದ್ದ ಉಡುಪುಗಳು ಲಭ್ಯವಿದ್ದು, ಜಿಲ್ಲೆಯ ಎಲ್ಲಾ ಇಲಾಖೆ/ ನಿಗಮ ಮಂಡಳಿಗಳ ಅಧಿಕಾರಿಗಳು ಹಾಗೂ ನೌಕರರು ಖಾದಿ ಮಳಿಗೆಗೆ ಭೇಟಿ ನೀಡಿ ಖಾದಿ ಸಿದ್ದ ಉಡುಪುಗಳನ್ನು ಖರೀದಿಸುವ ಮೂಲಕ ಖಾದಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಖಾದಿ ಕಸುಬುದಾರರನ್ನು ಹೆಚ್ಚಾಗಿ ಪ್ರೋತ್ಸಾಹಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

## ಫೆ.14 ರಿಂದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮೇಳ

ತುಮಕೂರು: ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಫೆಬ್ರವರಿ 14 ರಿಂದ 27ರವರೆಗೆ ನಗರದ ಅಮಾನಿಕೆರೆ ಬಳಿಯಿರುವ ಗ್ಲಾಸ್ ಹೌಸ್‌ನಲ್ಲಿ ರಾಜ್ಯ ಮಟ್ಟದ ವಿಶೇಷ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಲಾಗಿದೆ.

ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಫೆಬ್ರವರಿ 14ರಂದು ಮಧ್ಯಾಹ್ನ 12 ಗಂಟೆಗೆ ಕಾರ್ಯಕ್ರಮವನ್ನು ಉದ್ಘಾಟಿಸುವರು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುಗಾದಿ ಹಾಸ್ಯಗೋಷ್ಠಿ ಹಾಸ್ಯಪಟುಗಳಿಗೆ ಆಹ್ವಾನ

ತುಮಕೂರು:ಪ್ರತಿ ವರ್ಷಏಪ್ರಿಲ್ 1ರಂದು ಮೂರ್ಖರ ದಿನಾಚರಣೆ ನಡೆಸಿಕೊಂಡು ಬರುತ್ತಿರುವ ಹಾಸ್ಯ ಸಾಹಿತಿ ದಿ.ಗೌಡನಕಟ್ಟೆತಿಮ್ಮಯ್ಯನವರು ಸ್ಥಾಪಿಸಿರುವ ನಗೆಮಲ್ಲಿಗೆ ಸಂಸ್ಥೆಯು ಈ ಬಾರಿ ಮೂರ್ಖರ ದಿನಾಚರಣೆಗೆ ಮುನ್ನಯುಗಾದಿ ಹಾಸ್ಯಗೋಷ್ಠಿ ಸ್ಪರ್ಧೆ ಏರ್ಪಡಿಸಿದೆ ಎಂದು ಸಂಸ್ಥೆ ಅಧ್ಯಕ್ಷೆ ಬಾ.ಹ.ರಮಾಕುಮಾರಿ ತಿಳಿಸಿದ್ದಾರೆ.

ಸ್ಥಳೀಯ ಹಾಸ್ಯ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ನಗೆಮಲ್ಲಿಗೆ ಸಂಸ್ಥೆ ವೇದಿಕೆ ಕಲ್ಪಿಸಲಿದೆ.ಹಾಸ್ಯ ಕವನ, ಹನಿಗವನ, ಅಣಕವಾಡು, ಹಾಸ್ಯ ಪ್ರಸಂಗ, ಉತ್ತಮ ನಗೆಹನಿ, ಹಾಸ್ಯಅಭಿನಯ ಹೀಗೆ ಪ್ರೇಕ್ಷಕರನ್ನುರಂಜಿಸಬಹುದಾದಯಾವುದೇನಗೆ ಪ್ರಾಕಾರಗಳನ್ನು ಸ್ಪರ್ಧೆಯಲ್ಲಿ ವಾಚನ ಅಥವಾ ಪ್ರದರ್ಶನ ಮಾಡಬಹುದು.ವಯೋಮಿತಿಯ ನಿಬಂಧವಿಲ್ಲ, ಪ್ರೇಕ್ಷಕರನ್ನು ನಗಿಸಬಲ್ಲೆ ಎಂಬ ವಿಶ್ವಾಸದಎಲ್ಲಾ ವಯಸ್ಸಿನ ಹಾಸ್ಯಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಆಸಕ್ತರು ಹೆಚ್ಚಿನ ವಿವರ ಹಾಗೂ ಹೆಸರು ನೋಂದಾವಣೆಗೆಅಧ್ಯಕ್ಷೆ ಬಾ.ಹ.ರಮಾಕುಮಾರಿ–9448694323, ಕಾರ್ಯದರ್ಶಿ ಅಬ್ಬಿನಹೊಳೆ ಸುರೇಶ್–9845118303 ಇವರನ್ನುಇದೇ ಫೆಬ್ರವರಿ 25ರೊಳಗೆ ಸಂಪರ್ಕಿಸಬಹುದು.

## ಫೆ.13ರಂದು ವಿದ್ಯುತ್ ವ್ಯತ್ಯಯ

ತಿಪಟೂರು: ಕೆ.ಬಿ.ಕ್ರಾಸ್ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಕೆ.ಪಿ.ಟಿ.ಸಿ.ಎಲ್ ವತಿಯಿಂದ 220/110/11 ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿರುವುದರಿಂದ ಫೆ.13 ಶುಕ್ರವಾರ ಬೆಳಿಗ್ಗೆ 10:00 ರಿಂದ ಸಂಜೆ 06:00 ಗಂಟೆಯವರೆಗೆ ನಗರ ವ್ಯಾಪ್ತಿ ಹೊರತು ಪಡಿಸಿ ತಾಲ್ಲೂಕಿನ ಗ್ರಾಮೀಣ ಭಾಗದ ವಿವಿಧ ಪ್ರದೇಶಗಳಲ್ಲಿ ಎಲ್ಲಾ ನಿರಂತರ ಜ್ಯೋತಿ ಹಾಗೂ ಐ.ಪಿ. ಪೂರಕಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಈ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಗ್ರಾಹಕರು ಸಹಕರಿಸಬೇಕೆಂದು ಬೆವಿಕಂ ತಿಪಟೂರು ಕಾರ್ಯ ಮತ್ತು ಪಾಲನೆ ಉಪವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

## ಹೊನ್ನವಳ್ಳಿ ಉಪಸ್ಥಾವರದಲ್ಲಿ ನಿರ್ವಹಣೆ: ಫೆ.13ರಂದು ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ

ತಿಪಟೂರು : ತಾಲ್ಲೂಕಿನ ಹೊನ್ನವಳ್ಳಿ ಉಪಸ್ಥಾವರದಲ್ಲಿ ಫೆ.13ರಂದು 4ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳಲಾಗುತ್ತಿರುವ ಹಿನ್ನೆಲೆಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ತಿಮ್ಮಲಾಪುರ, ಗೌಡನಕಟ್ಟೆ, ಬಿದರೆಗುಡಿ ಎನ್.ಜೆ.ವೈ, ಹೊಸಪಟ್ಟಣ, ಹೂಲಿಹಳ್ಳಿ, ನಾಗತಿಹಳ್ಳಿ, ಹೊನ್ನವಳ್ಳಿ ಎನ್.ಜೆ.ವೈ, ಬಳುವನೇರಲು, ಪಟ್ರೇಹಳ್ಳಿ, ರುದ್ರಾಪುರ, ಗುಡಿಗೊಂಡನಹಳ್ಳಿ, ವಾಸುದೇವರಹಳ್ಳಿ, ಶಿವರಾಮನಹಳ್ಳಿ ಹಾಗೂ ಕೊನೆಹಳ್ಳಿ ಪೂರಕಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.